ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ)

ಸಂಪುಟ : ೪ ಸಂಚಿಕೆ : ೩

ಅಧ್ಯಕ್ಷರು

ಡಾ. ಎಂ. ಎಂ. ಕಲಬುರ್ಗಿ

ಸಂಪಾದಕರು

ಡಾ. ಬಿ. ಆರ್. ಹಿರೇಮಠ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜುಲೈ, ೧೯೮೪

ವಿದ್ಯಾರ್ಥಿ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಜುಲೈ, ೧೯೮೮

(ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ)

ಸಂಪಾದಕ ಮಂಡಲ :

ಅಧ್ಯಕ್ಷರು :

ಡಾ. ಎಂ. ಎಂ. ಕಲಬುರ್ಗಿ

ಸಂಪಾದಕರು :

ಡಾ. ಬಿ. ಆರ್. ಹಿರೇಮಠ

ಸದಸ್ಯರು :

ಪ್ರೊ. ವಾಯ್. ಎಲ್. ಇನಾಮದಾರ
ಪ್ರೊ. ಕೆ. ಎನ್. ಶೇಷಾದ್ರಿ
ಪ್ರೊ. ವ್ಹಿ. ಜಿ. ಮಾರೀಹಾಳ
ಶ್ರೀ ಸಿ. ಎಂ. ಕಡಕೋಳ
ಶ್ರೀ ಎಂ.ಎನ್. ವೋಟಿಬೆನ್ನೂರ
ಶ್ರೀಮತಿ ಎ. ಎಂ. ಸುಧಾದೇವಿ
ಶ್ರೀ ಎಂ. ಸಿ. ಚಿಕ್ಕಮಠ
ಶ್ರೀ ವೆಂಕಟೇಶಕುಮಾರ್

ಸದಸ್ಯ-ಕಾರ್ಯದರ್ಶಿ :


ಶ್ರೀ ಎಸ್. ಬಿ. ನಾಯಕ

ಪ್ರಕಾಶಕರು .

ಎಸ್. ಬಿ. ನಾಯಕ
ಕಾರ್ಯನಿರ್ವಾಹಕ ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಎಚ್. ಗಂಗಯ್ಯ
ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ-೫೮೦ ೦೦೩



ಡಾ|| ಎಸ್. ಜಿ. ದೇಸಾಯಿ
ನೂತನ ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಂಪಾದಕೀಯ

ಕುಲಪತಿಗಳ ಆಗಮನ-ನಿರ್ಗಮನ

೨೦ ಜೂನ ೧೯೮೮. ಡಾ. ಡಿ.ಎಂ. ನಂಜುಂಡಪ್ಪನವರ ನಿರ್ಗಮನ, ಡಾ. ಎಸ್. ಜಿ. ದೇಸಾಯಿಯವರ ಆಗಮನ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕುಲಪತಿ ಅಧಿಕಾರದ ಹಸ್ತಾಂತರ.

ಡಾ. ಡಿ. ಎಂ. ನಂಜುಂಡಪ್ಪ ಮೂಲತಃ ಅರ್ಥಶಾಸ್ತ್ರಜ್ಞರು. "ಖೋಟಾ ನಾಣ್ಯಗಳು ಸಾಚಾನಾಣ್ಯಗಳನ್ನು ಚಲಾವಣೆಯಿಂದ ಹೊರಗೆ ಅಟ್ಟುತ್ತವೆ" ಎಂಬುದು ಗ್ರೆಷಾಮ್‌ನ ಅರ್ಥನೀತಿ. ಈ ಅರ್ಥನೀತಿ ವಿಶ್ವವಿದ್ಯಾಲಯವನ್ನು ಪ್ರವೇಶಿಸುತ್ತಿರುವಾಗ ಅರ್ಥಶಾಸ್ತ್ರಜ್ಞ ಡಾ. ಡಿ. ಎಂ. ನಂಜುಂಡಪ್ಪನವರು ಕುಲಪತಿಯಾಗಿ ಬಂದು 'ಸಾಚಾ ನಾಣ್ಯಗಳು' ಚಲಾವಣೆಗೆ ಬರುವಂತೆ ನೋಡಿಕೊಂಡರು. ಹೀಗಾಗಿ ಅವರು ಕೇವಲ 'ನಚ್ಚಿನ ಕುಲಪತಿ'ಯಾಗಿ ಬಾಳದೆ 'ಕೆಚ್ಚಿನಕುಲಪತಿ'ಯೂ ಆಗಿ ಆಳಿದರು. ಒಬ್ಬ ಕುಲಪತಿಯ ಪ್ರಾಮಾಣಿಕತೆ-ಪರಿಶ್ರಮಗಳು ಒಂದು ಶಿಥಿಲಗೊಂಡ ಶಿಕ್ಷಣ ಸಂಸ್ಥೆಯನ್ನು ಹೇಗೆ ಪುನರುಜ್ಜೀವನಗೊಳಿಸಬಲ್ಲುವೆಂಬುದಕ್ಕೆ ಅವರ ಆಳಿಕೆ ಒಂದು ಉತ್ತಮ ಉದಾಹರಣೆಯೆನಿಸಿತು.

'ವಿದ್ಯಾರ್ಥಿ ಭಾರತಿ', ನಿರ್ಗಮಿಸಿದ ಡಾ. ಡಿ.ಎಂ. ನಂಜುಂಡಪ್ಪನವರಿಗೆ ವಿದಾಯ ಹೇಳುತ್ತ, ಆಗಮಿಸಿದ ಡಾ. ಎಸ್. ಜಿ. ದೇಸಾಯಿ ಅವರಿಗೆ ಸ್ವಾಗತ ಕೋರುತ್ತದೆ.

ಡಾ. ಎಸ್. ಜಿ. ದೇಸಾಯಿ ಮೂಲತಃ ವೈದ್ಯತಜ್ಞರು. ಮದ್ದು, ಚುಚ್ಚುಮದ್ದು, ಶಸ್ತ್ರಗಳನ್ನು ಹಿಡಿದುಕೊಂಡೇ ಅವರು ಕರ್ನಾಟಕ ವಿಶ್ವವಿದ್ಯಾಲಯವನ್ನು ಪ್ರವೇಶಿಸಿದ್ದಾರೆ. ಈ ಶಿಕ್ಷಣ ಸಂಸ್ಥೆಯ ಆರೋಗ್ಯ ರಕ್ಷಣೆ-ಅನಾರೋಗ್ಯ ನಿವಾರಣೆಗಾಗಿ ಅವುಗಳನ್ನು 'ನಿಷ್ಠುರ ಕರುಣೆ'ಯಿಂದ ಅವರು ಬಳಸಬಲ್ಲರು. ಪ್ರಥಮ ಸಂದರ್ಶನದಲ್ಲಿಯೇ ಪ್ರಭಾವ ಬೀರುವ ನೇರ ನಿಲವಿನ ಈ ಕುಲಪತಿ, ನೇರ ನಡೆ-ನೇರ ನುಡಿಗಳಿಗೆ ಹೆಸರಾದವರು. ಈ ಎತ್ತರದ ಕುಲಪತಿಯ ಅವಧಿಯಲ್ಲಿ ವಿಶ್ವವಿದ್ಯಾಲಯ ಇನ್ನೂ ಎತ್ತರ ಬೆಳೆದು 'ಪಾವಟಿಪಥ' ಮುಂದುವರಿಯಲೆಂದು 'ವಿದ್ಯಾರ್ಥಿ ಭಾರತಿ' ಹಾರೈಸುತ್ತದೆ.

'ವಿದ್ಯಾರ್ಥಿ ಭಾರತಿ' ಈ ಸಲ "ಕವನ ವಿಶೇಷಾಂಕ"ವಾಗಿ ಪ್ರಕಟವಾಗುತ್ತಿದೆ. ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಶಿವಮೊಗ್ಗೆಯ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗಗಳು ನಡೆಸಿದ 'ವಿದ್ಯಾರ್ಥಿ ಕವಿಸಮ್ಮೇಲನ'ದಲ್ಲಿ ಓದಿದ ಬಹುಸಂಖ್ಯೆ ಕವನಗಳ ಗುಚ್ಛ ಈ ಸಂಚಿಕೆ. ಹೀಗಾಗಿ ಇದು ದಕ್ಷಿಣೋತ್ತರ ಕರ್ನಾಟಕದ ತರುಣ ಪ್ರತಿಭೆಗಳ ಪುಂಜವಾಗಿ ಪರಿಣಮಿಸಿದೆ. ಸಮಗ್ರಕರ್ನಾಟಕದ ವಿದ್ಯಾರ್ಥಿಮಿತ್ರರು ಇದೇರೀತಿ ಮುಂದೆಯೂ ತನ್ನನ್ನು ಒಳ್ಳೆಯ ವೇದಿಕೆಯನ್ನಾಗಿ ಬಳಸಿಕೊಳ್ಳಬೇಕೆಂದು 'ವಿದ್ಯಾರ್ಥಿ ಭಾರತಿ' ಆಶಿಸುತ್ತದೆ.

ಎಂ. ಎಂ. ಕಲಬುರ್ಗಿ
ಅಧ್ಯಕ್ಷರು

ಪರಿವಿಡಿ

● ಮಾರ್ಷಲ್ ಶರಾಮ

ವರಕವಿಗೆ ಒಂದೆರಡು ಮಾತು

ವರಕವಿ,
ಹಕ್ಕಿ ಹಾರುವುದ ನೋಡಿದ್ದೇನೆ
ಮಾತ್ರವಲ್ಲ
ಸೂಕ್ಷ್ಮವಾಗಿ ಗಮನಿಸಿದ್ದೇನೆ ಕೂಡಾ.
ಹಾರುವುದ ಕಂಡು, ಹಿಡಿಯ ಹೋಗಿದ್ದೇನೆ.
ಹಿಡಿದೆ, ಹಿಡಿದೆ, ಹಿಡಿದೇಬಿಟ್ಟೆ ಎನ್ನುವಷ್ಟರಲ್ಲಿ
ಆ ಚಾಲಾಕು ಹಕ್ಕಿ ಮತ್ತೆ ಹಾರಿಹೋಯಿತು.
ಸುಮ್ಮನೇ ಹೋಗಲಿಲ್ಲ;
ತನ್ನ ಕುರಿತು 'ಹಕ್ಕಿ' ಎಂದು ಅಪಮಾನಿಸಿದ
ನಿನ್ನನ್ನು ತನ್ನ ನಖಗಳಿಂದ ಅಪ್ಪಳಿಸಿಹೋಯಿತು.

ನಿನ್ನ ಕುರುಡು ಕಾಂಚಾಣಕ್ಕೆ,
ಇನ್ನೂ ಒಂದು ಕಣ್ಣು ಹೆಚ್ಚಾಗಿದೆ,
ಒಂದು ಕಣ್ಣು ಹೆಚ್ಚಾಯಿತು ಎಂದು
ಖುಷಿಪಡಬೇಡ;
ಕಾರಣ
ಈ ಕಣ್ಣು ನೋಡುವುದು–
ನೋಡಬಾರದ್ದನ್ನು ಮಾತ್ರ.

ನನಗೊಂದು ಸಂದೇಹ–ವರಕವಿ;
ನೀನು ಸಾಕಿದ ಕನ್ನಡ ಕಂದನ ಬೆಳವಣಿಗೆಯನ್ನು
ಅದರ ತಾಯ್ನಾಡಲ್ಲೇ ಕಂಡು, ಹೇಸಿ
ಮರಾಠಾ ನಾಡಿನಲ್ಲಿ ಅಸುನೀಗಿದೆ ಎಂದು ಭಾವಿಸಲೆ ?

ಕನ್ನಡಕ್ಕೆ ನೀನು 'ದತ್ತ'.
ಆದರೆ

ಕನ್ನಡದ ಗಾರುಡಿಗ,
ನಿನ್ನ ಪಾರ್ಥಿವಶರೀರ ನಿನ್ನ ನಾಡಿಗೆ ತರಲಿಲ್ಲ;
ಏಕೆ ತರಬೇಕು ?
ಇದೇನು ರಸಿಯವೇ ? ಅಮೇರಿಕೆಯೇ ? ಇಂಗ್ಲಂಡೇ ?
ನಿಮ್ಮಂಥವರ ಮೃತದೇಹವ ಹೊತ್ತುತಂದು
ಸ್ಮಾರಕ ರಚಿಸಲು ?

ಅಯ್ಯೋ ಬಿಡು !
ಇದನ್ನೆಲ್ಲಾ ಯೋಚಿಸಲು ಪುರುಸೊತ್ತೆಲ್ಲಿ ?
ಆ ಅಣೆಕಟ್ಟಿನ ಶಂಕುಸ್ಥಾಪನೆಗೆ ಹೊರಟಿದ್ದೇನೆ;
ಯಾರು ಸತ್ತವ ? ದರಬೇಸಿಯೇ ?
ಅಲ್ಲಾ ಸ್ವಾಮಿ, ದ. ರಾ. ಬೇಂದ್ರೆ;
ಅದೇ, ಅದೇ ನಾನೂ ಹೇಳಿದ್ದು;
ಸತ್ತವರ ಕುರಿತು ಯೋಚಿಸುವ ಸರಕಾರ
ನಮ್ಮದಲ್ಲ;
ಜೀವಂತ ಜನರನ್ನಷ್ಟೆ ಉದ್ಧಾರ ಮಾಡಲು
ಪಣತೊಟ್ಟಿರುವ ಸರಕಾರ ನಮ್ಮದು.

ಕೊನೆಗೆ
ವಿವರವಾಗಿ ಮಾತನಾಡೋಣ,
ಈಗ ದಿಲ್ಲಿಗೆ ಹೊರಟಿದ್ದೇನೆ;
ಅಮ್ಮನನ್ನು ಕಾಣಲು–
ಕಾಸರಗೋಡು ಗಡಿನಾಡಿನ
ಸಮಸ್ಯೆಯ ಕುರಿತು ಮಾತನಾಡಲು.

□ □

● ಆರ್. ಪಿ. ನಿರಂಜನ

ಬದುಕುತ್ತೇನೆ, ಉಷಾ ಕಾಯುತ್ತೇನೆ

ಕೊಂದೆಯಾ? ಕಡೆಗೂ ಕೊಂದೆಯಾ?
ಕೊಲ್ಲು! ನೀ ಕೊಂದೆಯೆಂದು ನನಗೆ ಕೋಪವಿಲ್ಲ.
ಆದರೆ
ನನ್ನ ಅನಿಸಿಕೆಗಳನ್ನು ಮಾತ್ರ ಕೊಂದು
ನನ್ನನುಳಿಸಿದೆಯಲ್ಲಾ ಎಂದು ಕೋಪ.
ಕಡೆಗಣ್ಣನೋಟದಲೇ ಪ್ರೇಮದ ಅ, ಆ, ಇ, ಈ ಕಲಿಸಿ
'ಪ್ರೇಮ' ಎಂಬೆರಡಕ್ಷರವ ಅರ್ಥೈಸಿ
ಕಡೆಗೆ
ಬೇರೊಬ್ಬನ ಕೈಯಲ್ಲಿದ್ದ ತಾಳಿಗೆ ತಲೆಬಾಗಿ
'ಮದುವೆ' ಬಂಧನಕ್ಕೆ ಒಳಗಾಗಿ
ನನ್ನಾಸೆಯ ಕೊಂದೆಯಲ್ಲಾ ಎಂದು ಕೋಪ.
ಭಾವನೆಗಳಿಲ್ಲದ ಮನುಷ್ಯ ಬದುಕಿಯೂ ಸತ್ತಂತೆ.
ನಿಜ! ಆದರೆ ಉಷಾ, ಸತ್ತ ಅನಿಸಿಕೆಗಳಿಗಾಗಿ
ಸಾಯುವಷ್ಟು ಅಸಹಾಯಕ ನಾನಲ್ಲ.
ಆದ್ದರಿಂದಲೇ ಬದುಕಿದ್ದೇನೆ, ಬದುಕುತ್ತೇನೆ!
ನನ್ನ ಭಾವನೆಗಳಿಗೆ ನೀರೆರೆದು ಬೆಳೆಸಿ ಕಾಪಾಡುವಾಕೆ
ಬರವವರೆಗೂ ಕಾಯುತ್ತೇನೆ,
ಬದುಕುತ್ತೇನೆ, ಉಷಾ ಕಾಯುತ್ತೇನೆ.

□□

● ನಾಗಮಣಿ ಶೇ.

ಬಂದಣಿಕೆ

ಹೆರುವವರಿಗೆ ಹೊರುವ ಚಿಂತೆಯಿರೆ
ಇಳೆಯುಲಿ ಇಳಿಯುದು ತಳಿ ಇಷ್ಟೊಂದು.
ಇದೇ ಭಾರತ ನಾರಿಯು ಬಸಿರ ಕಳೆ, ಕೊಳೆ
ವಾಪಸು ಆಗುವುದಿರಲಿ ಮತ್ತೊಂದು ಬಸಿರು
ಬಸಿರು ಇಳೆಗೊಂದು, ಬಸಿರು ಒಳಗೊಂದು
ಇದೊಂದು ಬಂದಣಿಕೆ ಬಂಧನ ದೇಶೀನಾರಿಮಣಿಗೆ
ಬವಳಿ ಬಂದರೂ ಬಿಡರು ಬಸಿರ ಭಾಂಗ, ಭಗಿನಿಯರು.

□ □

● ಬಿ. ಆರ್. ಮಂಜುನಾಥ

ವಿರಹ

ನಾ ದೂರದಲಿ ಇದ್ದಾಗ ಕೈ ಬೀಸಿ
ಕರೆಯುತ್ತಿದ್ದವು ನೀ ಬರೆದ ಪತ್ರಗಳು.
ಹಂಬಲಿಸಿ ಹಾಗೂ ಹೀಗೂ ಬಳಿಗೈತಂದು
ನೋಡಿದರೆ ಕಾಣುವುದೇನು ? ಬರಡಾದ
ಆ ನಿನ್ನ....!
ನಿನ್ನ ಬಳಿ ಬಂದು ನಿಲ್ಲುವ ಮೊದಲು
ಈ ಉದಾಸೀನದ ಉಸಿರು ವ್ಯಾಪಿಸುವ
ಬದಲು, ದೂರದಿ ಕಂಡ ನನ್ನ ಆ
ಕಲ್ಪನೆಯೇ ಬಹಳ ಸೊಗಸಾಗಿತ್ತು.
ಅರ್ಥವಾಗದು! ನನಗೆ ನಿನ್ನೀ ಪತ್ರದ ಸಾರ.
ಬೇಡಿನ್ನು ಈ ಮಿಲನದೌದಾಸೀನ್ಯ,
ಸಾಕು ಮತ್ತೆ ಕಳುಹಿಸು ನನ್ನ
ವಿರಹ ಸೌಭಾಗ್ಯಕ್ಕೆ.
ಮರೆಸಿಬಿಡು ನಾ ನಿನ್ನ ಬಳಿಗೈತಂದೆನೆನ್ನುವ ಪರಿಯ.
ಅಲೆವುದೇ ಸುಖವೇನೊ ಹಾರೈಸಿ
ನಿನ್ನ ಸನ್ನಿಧಿಯ.

□ □

● ಮ. ಓ. ತಿಪ್ಪಯ್ಯ

ಎತ್ತು

ಎತ್ತು
ನಿನ್ನ ಮೇಲೆತ್ತಲು
ಹುಟ್ಟಿತ್ತು
ಹೊತ್ತುಗೊತ್ತಿಲ್ಲದೆ ನಿನಗಾಗಿ
ದುಡಿದಿತ್ತು.
ಹುರುಳಿ ಮೆಚ್ಚಿಲ್ಲ ಅದಕೆ
ಬಂದೊತ್ತು.
ಹೆಗಲಲ್ಲಿ ನೊಗ ಹೊತ್ತು, ಬೆಳೆಯು
ಬೆಳೆದಿತ್ತು.
ಬೆಳೆಕಂಡ ದೌಲತ್ತು ಅದಕಿಲ್ಲ
ಕಿಂಚಿತ್ತು.
ಅದರಿಂದ ನೀ ಕಂಡೆ ಸಿರಿಯು
ಸಂಪತ್ತು.
ಪ್ರತಿವರುಷ ದುಡಿದುಡಿದು
ಒಣಗಿತ್ತು.
ಕೊನೆಗೊಮ್ಮೆ ಮುದಿಯಾಗಿ
ಸತ್ತಿತ್ತು.
ಸತ್ತರೂ ನಿನಗಾಯ್ತು ಅದರಿಂದ
ಮುಳ್ಳೊತ್ತು.

□□

● ಡಿ. ಭೋಜರಾಜು

ಕಾಡುಮಲ್ಲಿಗೆ

ಕಾನನವೆ ಮನೆಯಾಗಿ ಮೈತುಂಬಿ ಬಿರಿದೆನಗೆ
ನಾಡ ನೀರೆಯರ ಮುಡಿಸೇರುವ ಬಯಕೆ ಎನಗಿಲ್ಲ.
ದಾರದ ಜೊತೆಗೂಡಿ ಮುಡಿಸುತ್ತ ಬಿಸಿಲಿಗೆ ಬಾಡಿ
ಆ ಅಂದಗೆಡುವ ಬಂಧನವಾಸ ನನಗೆ ಬೇಕಿಲ್ಲ.

ಮಧುವನರಸುತ ಬರುವ ಮರಿದುಂಬಿಗಳಿಗೆ
ಮಧುವಿನ ಸವಿಯನುಣಿಸುವಾ ಹೊರತು
ದುರಾಸೆಯ ಹುಡುಗಿಯರ ಹಿಡಿಯಿಂದ ಅವರ
ಮುಡಿಸೇರಿ ಹುಡಿಯಾಗುವುದು ನನಗೆ ಬೇಕಿಲ್ಲ.

ನನ್ನಂದವ ಕಂಡು ಮನದಿ ಕೌತುಕಪಟ್ಟು
ಸ್ವೇಚ್ಛೆಯಾಗಿರುವ ಎನಗೆ ಚಿತ್ರಹಿಂಸೆಯ ಕೊಟ್ಟು
ಕಟ್ಟಿ ಹಿಂದಲೆಯಲಿ ಮುಡಿಯಲ್ಲಿ ಮುದುರಿಟ್ಟು
ಬಾಗಿ ಬಳುಕುತ ನಡೆವ ನಲ್ಲೆಯರ ನಂಟು ನನಗೆ ಬೇಕಿಲ್ಲ.

ಹಸಿರೆಲೆಗಳ ನಡುವೆ ವಿಕಸಿಸಿ ನಲಿಯುವ ಹೊರತು
ಪ್ರಕೃತಿಯಲ್ಲಿ ಒಂದಾಗಿ ಬೆರೆತು ಮೆರೆಯುವ ಹೊರತು
ದೇವರ ಹೆಸರಿನಲಿ ಅರ್ಚಕನ ಕೈಸೇರಿ
ಸಂಜೆಯಲಿ ಅವನ ಕಾಲಕಸವಾಗುವುದು ಇಷ್ಟವಿಲ್ಲ.

ತಂಪುಗಾಳಿಯ ಜೊತೆಗೆ ಕಂಪು ಸೂಸುವ ಹೊರತು
ಮನದಿಂ ಬಿರಿದಲ್ಲೆ ಲಯಿಸುವಾಸೆಯ ಹೊರತು
ಕಾಂತಾರದಂತರದಿ ಬಾಳಿ ಬದುಕುವ ಎನಗೆ
ಅಳಿಪಿ ಎನ್ನನು ಮಾರಿ ಕಾಸು ಕೊಡುವ
ನಾಡಜನರೊಡನಾಟ ಇಷ್ಟವಿಲ್ಲ.

□□

● ಡಿ. ಯೋಗರಾಜಪ್ಪ

ಕರಾಮತ್ತು

ನನ್ನ ಒಡನಾಡಿ ಭೂಮಿಯಲ್ಲಿ
ಅಂಡಲೆಯುವ ದನಗಳೇ ಹೆಚ್ಚು.
ಹಸಿದ ಅವು ಇಳಿಮೋರೆ ಹಾಕಿಕೊಂಡು
ಎಗ್ಗಿಲ್ಲದೆ ಮುಂದಿನ ಬಾಗಿಲಲ್ಲೆ ನುಗ್ಗಿ ಬರುತ್ತವೆ.
ಭಕ್ತರಂತೆ ನಮ್ಮ ಸುತ್ತ ಸುತ್ತುತ್ತವೆ.
ಉದಾರಿ ಎನಿಸಿಕೊಂಡ ಅವರು ಇವರು, ನಾನು ನೀವು
ಅಸ್ತು ಎನ್ನುತ್ತೇವೆ.
ನೋಡಿ! ಮೇಲೆ ನುಗ್ಗುತ್ತಿವೆ, ದಾರಿ ಬಿಡಿ!

ಅಲ್ಲಿ ಕತ್ತೆಗೆ
ಇಲ್ಲಿ ಎತ್ತಿಗೆ
ನಾವು ಎಮ್ಮೆಗೆ
ನೀವು ಕುರಿಗೆ
ಒಂದು ಕಡೆಯೂ ಮನುಷ್ಯನಿಗಿಲ್ಲದೆ
ಎಲ್ಲವನ್ನೂ ಇಟ್ಟು ಕಟ್ಟಿಕೊಟ್ಟಿದ್ದೀರಿ.
ಎಲ್ಲ ಪ್ರಾಣಿರಾಜ್ಯ
ಕತ್ತೆ ಎತ್ತಿಗೆ
ಎತ್ತು ಕತ್ತೆಗೆ
ಒದೆಯುತ್ತಿದೆ, ಹಾಯುತ್ತಿದೆ.
ಒಂದು–ಇಟ್ಟಿದ್ದ ಗಬಗಬ ತಿನ್ನುತ
ಮತ್ತೊಂದು–ತಲೆತಗ್ಗಿಸಿ ನಡೆಯುತಿದೆ.

ಅಯ್ಯೋ!
ಕತ್ತೆ ಎತ್ತಿನ ನಡುವೆ ಕುರಿ ಬಿತ್ತು ಎತ್ತಿರಿ!
ಅಗೋ! ಅಗೋ!! ಎತ್ತುವವನಿಗೇ ಬಿತ್ತು

ಕತ್ತೆ, ಎತ್ತಿನ ಲತ್ತು,
ಅಯ್ಯೋ! ಭಸ್ಮಾಸುರ ಶಿವನನ್ನು ಬೆನ್ನಟ್ಟಿದಂತೆ
ಒಂದು ಜೀವ ತಿನ್ನುತ್ತಿವೆ.
ಕಾಪಾಡಿ! ಕಾಪಾಡಿ!! ಕಾಪಾಡಿ!!!

□ □

ಭಕ್ತಿ

ಸರ್ವಮಯ ನಿರಕಾರ
ಕೊಟ್ಟು ನಿನಗೆ ಆಕಾರ
ಭಕ್ತಿಯಿಟ್ಟು ಪೂಜಿಸಿದರು
ಗುಡಿಯ ಕಟ್ಟಿ ಬೀಗ ಹಾಕಿದರು.

ದಿನವೂ ನಿತ್ಯ ಊಟವೆಂದು ಹೂವು ಪತ್ರೆ
ಹೆಚ್ಚು ಅಂದ್ರೆ ಧೂಪದಾರತಿ ಮಂತ್ರ ಪಠನ
ನಿನ್ನ ನೆಪದಿ ಹಿಡಿದು ಭಿಕ್ಷಾಪಾತ್ರೆ
ತಮಗಾಗಿ ಕಟ್ಟಿದರು ವಿಶಾಲಭವನ.

ನೀನು ಹೇಳಲಾರೆಯೆಂದು
ತಪ್ಪು ಎಲ್ಲ ನಿನ್ನದೆಂದು
ನೀನು ಕೇಳೆ ಗಂಟೆ ಬಡಿದು
ಊದಬತ್ತಿ ನಾತದಲ್ಲಿ ಅಮಲು ಬರಲು ಸುರುವಿ ಬಿಟ್ಟರು.

ಹೀಗೇ ಇಹೆನು! ಎಂದು ಊಟಬಿಟ್ಟು
ಹಲವು ಬಗೆಯ ಹೂವು ತಂದು ಮಡಿಲೊಳಿಟ್ಟು
ಮಾಡಿದಡಿಗೆ ನಿನ್ನ ಮುಂದೆ ಇಟ್ಟು
ಹಬ್ಬಮಾಡಿ ನಿನಗೆ ತೋರಿ ಒಡಲೊಳಿಟ್ಟರು.

□ □

● ರಹಮಾನ್ ಅಲಿಖಾನ್

ಒಂಟಿತನ

ನಿಮ್ಮೊಡನೆ ನಿಮ್ಮವನಾಗಿ
ಕರೆದೆಡೆಗೆ ಬಾಲ ಮುದುರಿಸುತ್ತ ತಲೆತಗ್ಗಿ
ಮೈಉಬ್ಬಿ ನಿಮ್ಮತನಕಾಗಿ ಹಿಗ್ಗಿ,
ಕ್ಷಣಕೊಮ್ಮೆ ಬೆಚ್ಚುತ್ತ ಭಯಕಾಗಿ ನೆಚ್ಚುತ್ತ
ಇಲ್ಲದಿದ್ದುದನು ಇರಿಸುತ್ತ ನನ್ನನಾ ಮೆಟ್ಟಿಕೊಳ್ಳುವುದಕ್ಕಿಂತ
ಯಾರ ಹಂಗೂ ಇಲ್ಲದೆ ನನ್ನಲ್ಲಿ ನಾನಾಗುವ ಒಂಟಿತನವಿದೆ ನೋಡಿ,
ಅದು ನನಗೆ ಬಲು ಇಷ್ಟ.

ಅಧಿಕಾರ ದರ್ಪವ ಹೊತ್ತು, ಹುಕುಮ್ಮು ಚಲಾಯಿಸುತ್ತ
ರಂಡೆಮುಂಡೆಗಳ ಸಂಘದಲಿ ಮೋಜು ಉಡಾಯಿಸುತ್ತ
ಗಲ್ಲಿ ಬೀದಿಗಳಲ್ಲಿ ಚಪ್ಪಲಿ–ಹೂವಿನಹಾರ ಹಾಕಿಸಿಕೊಳ್ಳುತ್ತ
ಜೀ ಹುಜೂರುಗಳ ನಡುವೆ ಹಜರತ ಆಗುವುದಕ್ಕಿಂತ
ಗೈರುಹಾಜರಾಗುವ ಒಂಟಿತನವಿದೆ ನೋಡಿ,
ಅದು ನನಗೆ ಬಲು ಇಷ್ಟ.

ಮಹಲುಗಳ ನಡುವಿದ್ದು, ಹಾಹಾ-ಹಿಯುರ ಮೆಟ್ಟಿಲೊತ್ತು
'ನನ್ನದಾವರೆ' ಎಂಬ ಕನಸ ಕಾಣುತ್ತ. ಅವರ ಹೆಂಡಿರ ಕೊಳಕನ್ನು ತೊಳೆಯುತ್ತ
ಬೆವರ ಸುರಿಸುತ್ತ. ನಾ ಗಿಟ್ಟಿಸಿದ ರೊಟ್ಟಿಗೂ
ಅವರ ಬಟ್ಟಲಿಗೆ ಕೈಯೊಡ್ಡಿ, ಅವರ ಅಪ್ಪಣೆಗೆ ತುತ್ತೆತ್ತಿ,
ಅವರು ಉಂಡುದಕೆ ನಾ ತೇಗಿ, ನಾನವರ ನಂಟೆಂದು ಗಂಟು ಹಾಕುವುದಕ್ಕಿಂತ
ದಿಕ್ಕಿಲ್ಲದ ಪರದೇಸಿಯಂತಿರುವ ಒಂಟಿತನವಿದೆ ನೋಡಿ,
ಅದು ನನಗೆ ಬಲು ಇಷ್ಟ.

ಹುಚ್ಚು ಮತಕಟ್ಟೆಗಳ ಮುಡಿಯೊಂದು ಮುಡಿಘಟ್ಟಿ ಅಡಿಗಡಿಗೆ ಜಗಿಯುತ್ತ
ಅಮಿಷಕೆ ಆದರವನಿತ್ತು, ವ್ಯಕ್ತಿ ಮೌಲ್ಯಗಳ ಗಾಳಿಯಲಿ ತೂರಿಬಿಟ್ಟು
ನಿಮ್ಮ ಹುಚ್ಚು ಗುಂಪಿನಲಿ, ಅವರಿವರ ಮನೆ ಸುಡಲು ಹೊರಟು
ನನ್ನ ಮನಸಿಗೆ ನಾನೆ ಕೈಯಾರೆ ಬೆಂಕಿ ಹಚ್ಚಿಕೊಳ್ಳುವುದಕ್ಕಿಂತ
ನಿಮ್ಮ ಮತ ಜಾತಿಯಲೆ ನಿಮ್ಮತನ ಹುಗಿದು
ನನ್ನಂತೆ ನಾನಾಗಿ ಬದುಕುವ ಒಂಟಿತನವಿದೆ ನೋಡಿ,
ಅದು ನನಗೆ ಬಲು ಇಷ್ಟ.

● ಹ. ಹನಮಂತರಾಯಪ್ಪ

ಸೃಷ್ಟಿ-ಆಸ್ವಾದ

ವರ್ಷಕಾಲಗಳೆನ್ನದಂತೆ
ನಿಃಸ್ವಾರ್ಥದಿಂದ ದುಡಿಯುತಬಂದೆ.
ಅದು ಮರವಾಗಿ ಹೂವಾಗಿ ಹಣ್ಣಾಗಿ
ರಸಭರಿತವಾಗಿ ಶೋಭಿಸುತಿರಲು
ಅದರ ಹೊದಿಕೆಯನು ಕಿತ್ತು
ಅಲ್ಲಿನ ರಸದೌತಣವನು ಮಾಡುವನು ರಸಿಕ.
ಅವನು ಭೋಗಿಸಿದರೇನೇ ನಿನ್ನ ಕೆಲಸಕೆ ನೆಲೆ ಬೆಲೆ !
ಕೃತಕ ನೀನಯ್ಯಾ ನಿನಗಿಲ್ಲ ಆ ರಸದೌತಣ !!
ಶ್ರಮವೆಲ್ಲ ನಿನಗೆ, ಫಲವೆಲ್ಲ ಪರರಿಗೆ.
ನೀನೊಬ್ಬ ಸೃಷ್ಟಿಕರ್ತ; ಕಾರಣಪುರುಷ !
ಜೀವನದ ಜಂಜಾಟಗಳ ನೋವು ನಲಿವುಗಳ ನೀನುಂಡು
ಅದರ ಸಿಹಿ ಮಾತ್ರ ಬಿಡುವೆ.
ಇಷ್ಟಾದರೂ ನಿನ್ನ ಪರಿಶ್ರಮಕೆ ಬೆಲೆಯಿದೆ,
ಸಹೃದಯರೀ ಫಲವ ರುಚಿಸಿದಾಗ.

□ □

● ಕೆ. ಡಿ. ಕೃಷ್ಣಮೂರ್ತಿ

ನಮ್ಮೂರು

ನಮ್ಮೂರು ಇಲ್ಲೇ ಬಲು ಹತ್ತಿರ ಸ್ವಾಮಿ !!
ಪ್ಯಾಮಿನ ಬದಿಯಲ್ಲಿ, ಸೊಳ್ಳೆಯ ಮಡಿಲಲ್ಲಿ.
ಇಲ್ಲೇ…ಬಲು ಹತ್ತಿರ ! ಜಾರಿ ಬಿದ್ದರೆ ಮೂರೇ ಮಾರು !!
ಎದ್ದರೆ…ಕಾಣುವುದೇ ನಮ್ಮೂರು.
ಇಲ್ಲಿ ಯಾರೂ ಅಜ್ಞಾನಿಗಳಿಲ್ಲ ಸ್ವಾಮಿ.
ಇರುವವರೆಲ್ಲರೂ ಸುಜ್ಞಾನಿಗಳು.
ಓದದೇ ಬರೆಯುವ, ಬರೆಯದೇ ಓದುವ
ಓದದೆ ಬರೆಯದೆ ಬುರುಡೆ ಬಿಡುವ
ಇವರೆಲ್ಲರೂ ಸುಜ್ಞಾನಿಗಳೇ.
ನಮ್ಮವರೆಲ್ಲರೂ ನೇಗಿಲಯೋಗಿಗಳೇ ಸ್ವಾಮಿ.
ಉತ್ತದೇ ಬಿತ್ತುವ, ಬಿತ್ತದೇ ಬೆಳೆಯುವ
ಬಿತ್ತದೆ ಬೆಳೆಯದೆ ಉಣ್ಣುವ
ಜೋಗಿ ಭೋಗಿಗಳೆಲ್ಲರೂ ನೇಗಿಲಯೋಗಿಗಳೇ.
ನಮ್ಮೂರಲ್ಲಿ ಕಾಲಿಟ್ಟರೆ…ಸ್ವಾಮಿ
ಕೆಸರು ತಲೆಗೆ ಹಾರುತ್ತದೆ.
ನಡೆದರೆ ಜಾರುತ್ತೀರಿ, ಬೀಳುತ್ತೀರಿ.
ಬಿದ್ದರೆ ಏಳುವುದೇ ಇಲ್ಲ,
ಎದ್ದರೆ ಮತ್ತೆಲ್ಲೂ ಬೀಳುವುದೇ ಇಲ್ಲ.

□ □

ಎಂ. ಶಿವಪ್ಪ

ಆಸೆಗಳು

ಪ್ರವಾಹದ ಎದುರಿನಲಿ ಈಜುತಿರುವೆ
ಆದರೂ ನನಗಿಷ್ಟ ಈ ಬರಡು ಬಾಳು.
ಬಾಳಲು
ಒಮ್ಮೊಮ್ಮೆ ಥೂ
ಎನಿಸುವುದು.
ಮತ್ತೊಮ್ಮೆ ಏನೆಲ್ಲ ಆಸೆಗಳು
ಕಿತ್ತುಕಿತ್ತು ತಿನ್ನುವುವು,
ಮೃತಹೊಂದಿದ ಶ್ವಾನವನು
ರಣಹದ್ದುಗಳು ಮೆಟ್ಟಿ ತಿನ್ನುವ ಹಾಗೆ.
ಹೀಗೆಯೇ ಸಾಗಿತು ನನ್ನ ದಿನಚರಿ.
ನನ್ನ ಆಸೆಗಳೋ ಗರಿಬಿಚ್ಚಿ
ಮುಗಿಲಿನಲಿ ತೇಲುತಿರಲು
ಒಮ್ಮೊಮ್ಮೆ ಭೂಗರ್ಭವನು ಸೀಳಿ
ಹೋಗುತ್ತಿದ್ದುದೂ ಉಂಟು.
ಆದರೆ
ಅವೆಲ್ಲವೂ ನುಚ್ಚುನುರಿ
ಆದರೂ
ಕನಸಿನಲಿ ಯತ್ನಿಸಿದುದುಂಟು.

□ □

ಎಸ್. ವಿ. ಲಕ್ಷ್ಮೀನಾರಾಯಣ

ಎರಡು ಚಿಡಿಕವನಗಳು

ತಪ್ಪು

ಸೂಳೆಗಾರಿಕೆ ತಪ್ಪೆಂದು, ತಿಪ್ಪನಿಗೆ
ತಪ್ಪುದಂಡ ಹಾಕಿದ ಗೌಡ
ಮಾಗಿಯ ಛಳಿ ತಾಳಲಾರದೆ
ಮಾತಂಗಿ ನಾಗಿಯ ಮನೆಬಾಗಿಲು
ತಟ್ಟಿದ...!

ಪಲಾಯನ

ಶುಚಿ ರುಚಿ ಎಂದು
ಹಮ್ಮುತ್ತಿದ್ದ ಭಟ್ಟನಿಗೆ
ಕರಿದ ಜಿರಲೆಯ ತೋರಿದೊಡೆ
ಅದು ಕರಿಬೇವೆಂದು ವಾದಿಸಿದ!

□ □

● ರಾಮಚಂದ್ರ ಹೆಗಡೆ

ನನ್ನ ಯುನಿವ್ಹರ್ಸಿಟಿಯ ಭಾವಚಿತ್ರ

ನನ್ನ ಯುನಿವ್ಹರ್ಸಿಟಿಯ ಭಾವಗಳನ್ನು
ಹಿಡಿಯಲು ಕ್ಯಾಮಾರಾಕ್ಕೆ ಸಾಧ್ಯವಿಲ್ಲ.
ಶರತ್ಕಾಲದ ಮುಂಜಾವಿನ ಎಳೆ ಕಿರಣಗಳಲ್ಲಿ
ಎಳೆಹಸಿರು ಪ್ರತಿಫಲಿಸುವಾಗ ಯುನಿವ್ಹರ್ಸಿಟಿ
ಹಸಿರಾಗುತ್ತದೆ.

ವಸಂತದ ಹೂಗಳು ಬಿರಿದು
ಹರ್ಷೋಲ್ಲಾಸದ ಸಂಭ್ರಮದಲ್ಲಿ
ಮ್ಯಾಕ್ಸಿ, ಮಿಡಿ, ಸೀರೆ, ಪ್ಯಾಂಟುಗಳು
ನೋವಿನೊಂದಿಗೆ ಅರಳುವಾಗ
ಜೇನಿನ ಝೇಂಕಾರಕ್ಕೆ ನಾಚಿ
ಯುನಿವ್ಹರ್ಸಿಟಿ ಕೆಂಪಗಾಗುತ್ತದೆ
ರಸಿಕನಾಗುತ್ತದೆ.

ವಸಂತದ ಸೊಡರಿಳಿದು ನೀರಿಲ್ಲ
ದ ಗ್ರೀಷ್ಮವಾಗುವಾಗ
ಕರಿಕೂದಲು ಬಿಳಿಯಾಗುವಾಗ
ಯುನಿವ್ಹರ್ಸಿಟಿ ಕಂದುಬಣ್ಣವಾಗುತ್ತದೆ
ಕುಂದುತ್ತನೆ.

ಕಾಲದ ಲಯಬದ್ಧ ಟಿಕ್‌ಟಿಕ್‌ಕ್ಕೆ
ಕಾಲ ಕಳೆದು ಹೋಗುವಾಗ
ಈ ಬದುಕು ಸಾವುಗಳ ಜಾಲಕ್ಕೆ
ವಿರಕ್ತವಾಗಿ ನನ್ನ ಯುನಿವ್ಹರ್ಸಿಟಿ
ಗೊಮ್ಮಟನಾಗುತ್ತದೆ, ಅಮರವಾಗುತ್ತದೆ.

ಇಂತಹ ವರ್ಣಮಯ ಭಿನ್ನ
ಭಾವಗಳನ್ನು ಹಿಡಿಯಲು ಕವಿತೆಯೇ ಬೇಕು.

□ □

ನನಗೆ ಕವಿತೆ ಬರೆಯುವ ಮನಸ್ಸಿಲ್ಲ

ನನಗೆ ಕವಿತೆ ಬರೆಯುವ ಮನಸ್ಸಿಲ್ಲ.
ಕಥೆ ಬರೆಯಬೇಕು
ಗೆಳೆಯಾ ಕಥೆ ಬರೆಯಬೇಕು.
ಭಟ್ಟು, ನಾಗು, ಬೀರಿಗಳ
ಖಾಲಿಹೊಟ್ಟೆಯ ಪೋರಿಗಳ
ಹೊಟ್ಟೆಗಿಲ್ಲದ ಹಿಟ್ಟು
ಮಾಯವಾಗುವ ಕಥೆ
ಬರೆಯಬೇಕು, ಗೆಳೆಯಾ
ಕಥೆ ಬರೆಯಬೇಕು.
ಹಸಿವು ಹೊಟ್ಟೆಗೆ ವಿಕಿರಣ
ಉಣ್ಣಿಸುವ ರೇ-ಗನ್ನುಗಳ
ಅಂದ್ರೋಪುಗಳ ವಿಕಾರಗೊಳಿಸುವ
ವ್ಯವಸ್ಥೆಗಳ
ಲೆಬನನ್ನ, ಗಾರ್ಸಿಯಾಗಳ ಮೇಲೆ
ಬರೆಯಬೇಕು ಗೆಳೆಯಾ, ಕಥೆ
ಬರೆಯಬೇಕು.
ಹಾಡಲಾಗದಲ್ಲಿ ಹಲುಬಬೇಕು.
ಮಾಡಲಾಗದಲ್ಲಿ ಮರುಗಬೇಕು.
ಬರೆಯಬೇಕು ಗೆಳೆಯಾ
ಕಥೆ ಬರೆಯಬೇಕು.

□ □

ಕ್ರಾಂತಿ ಮಾಡು

ಏಳು ಕಾರ್ಮಿಕ
ಎದ್ದೇಳು!
ಸಾಕು ಮಾಡು ಈ ದುಡಿತ.
ಕತ್ತರಿಸಿದ್ಹಾಂಗೆಲ್ಲಾ
ಬೆಳದs ಬೆಳೀತೈತಿ ಕಾಡು.
ಹೇಳು, ಎಂದ ಮುಗೀತೈತಿ
ನಿನ್ನ ಹೊಟ್ಟಿಪಾಡು ?

ನಾನು ನಿನ್ಹಾಂಗs ಅಲ್ಲ ?
ಕಷ್ಟ ನಂಗೂ ಅರ್ಥಾಗತೈತಿ.
ಯಾಕ, ನಂಗ ಹೊಟ್ಟಿಲ್ಲೇನು ?
ನೋಡೀನಿ.
ನಿನ್ನೆಡಕ್ಕs ಬಲಕ್ಕs ಇರೋ
ಎಲ್ಲsಬ ಎಣಿಸಿ, ಕೂಡಿಸಿ ಗುಣಿಸಿ ನೋಡೀನಿ.
ಭಾಗಾಕಾರ ಮಾಡಿ ಉತ್ತರಾ ಹೇಳೀನಿ.
ಆದರೂ ಲೆಕ್ಕ ತಪ್ಪೈತಿ, ಯಾಕ ?
ನಿನಗ ತಿಳಿಯೂದಿಲ್ಲ.

ನಿನ್ನ ಕಣ್ಣಾಗಿನ ರಕ್ತ ಚೆಲ್ಲಿದಾಗ
ಬಿಳಿಗುಲಾಬಿ
ಕೆಂಪಾಗಿ ಅರಳಿದ್ದ ಕಂಡೀನಿ.
ಹಸsದ ಹೊಟ್ಟೀಗಿ ಜರಾ ನೀರು
ಭಾಳ ರುಚಿ ಹತ್ತಾವಂತ
ನೀ ಅಪ್ಪs ಅಲ್ಲಾ, ಹೇಳಿದ್ದ ಕೇಳೀನಿ.
ನಿನ್ನಾಳೋ ರಾಕ್ಷಸ್ರು
ಧಪಾ ಧಪಾ ಅಂತ
ನಿನ್ನ ಹೊಟ್ಟಿವ್ಯಾಲ

ನಡಿಯೋದ ನೋಡೀನಿ.
ಆದರೂ ನೀ, ಯಾಕ ಸುಮ್ಮನಿದ್ದೀ ಹೇಳು.
ನಿನಗ ತಿಳಿಯೂದಿಲ್ಲ ಆದಕ್ಕ
ನಿನ್ನೆಲಬಿನ್ಯಾಗ
ರಕ್ತಾ, ಮಾಂಸಾ ತುಂಬಬೇಕ.
ಹಸ್ಕದ ಹೊಟ್ಟಿಗಿ
ಜರಾ ರೊಟ್ಟಿ ಸಿಗಬೇಕು.
ಯಾಕ,
ಬಿಳೀ ಗುಲಾಬಿ ಬೆಳ್ಕ್ಯಗಾಗಿ
ಅರಳಬೇಕಂತ
ನಿನಗ ಅನಸೂದಿಲ್ಲಾ ?
ಹೆಂಗನಿಸೀತು;
ನಿನ್ನ ಪಾಡು, ನಿಂದ್ಕ ಹಾಡು.
ನಿನಗ ತಿಳಿಯೂದಿಲ್ಲಾ.

□ □

ಆಗಸ್ಟ ಹದಿನೈದು

ಆಗಷ್ಟ–ಹದಿನೈದಕ್ಕೆ ನಾ ಸಾಲೀವೊಳಗ
ಭಾಷಣಾ ಮಾಡಿ ಬಂದ್ಹಾಗಲೆಲ್ಲಾ
ನಮ್ಮಜ್ಜಿ ಹೇಳತಿತ್ತು
ಗಾಂಧಿ ಬಂದು ಸ್ವಾತಂತ್ರ್ಯ ತಂದು
ನಮ್ಮ ಜನಕ್ಕ ಏನ್ ಸುಖಾ ಕೊಟ್ಟ್ಯಾಂತ.
ಮತ್ತ ಕೇಳತಿತ್ತು
ಕಂಡೀಯೇನು ರೂಪಾಯಿಗೆ ಸೇರು ಬೆಣ್ಣಿ
ಬಿಲ್ಲೀಗೆ ಸೇರು ಹಾಲು
ಮತ್ತ ನಾಕ್ಕಾಸು ಕೊಟ್ಟರ
ಚೀಲತ್ತುಂಬ ಅಕ್ಕೀ ಜ್ವಾಳಾಂತ.

ಇಂದ ನಾ ದೊಡ್ಡಾವಾಗೀನಿ
ಈ ದೇಶದ ರಾಜಕೀಯ ನೋಡ್ಲಿಕತ್ತೇನಿ
ಹಿಂಸೆ, ಅತ್ಯಾಚಾರ, ಭ್ರಷ್ಟಾಚಾರ ಮಾಡಿ
ಸ್ವಾತಂತ್ರ್ಯದಿವಸs ಖಾದೀ ಜುಬ್ಬಾ ಹಾಕೊಂಡು
ಬರೀ ಮೈಲೇ ಕಣ್‌ಕಣ್ ಬಿಡೋ ಮಕ್ಕಳಿಗೆ
ಮಂಡಕ್ಕಿ ಪೆಪ್ಪರಮಂಟಾ ಹಂಚಿ
ಈಟುದ್ದ ಭಾಷಣಾ ಬಿಗಿದು
ವಿದೇಶೀ ಕಾರ್‍ನ್ಯಾಗ ಬಾರ್‌ಗ್ಹೋಗೋ ನಾಯಿಗಳಿಗೆ
ಮನಸ್ನಾಗs ಹಚ್ಯಾ ಅಂದೀನಿ
ಎದೀ ವ್ಯಾಗs ಕ್ಯಾಕರ್‍ಸಿ ಉಗಳೀನಿ.

ಹೊಟ್ಟೇಗಿ ಕೂಳಿಲ್ಲದ ಪುಟ್‌ಪಾತ್‌ವಳ್ಯಾಗ
ಮಲಗಿರೋ ಕೋಟ್ಯಾಂತರ
ಗಾಂಧಿ ವಯಸ್ಸಿನ ಮುದುಕರ್‍ನ
ನೋಡಿದಾಗಲೆಲ್ಲಾ ನನಗ
ಅಜ್ಜೀ ಮಾತು ನೆನಪಾಗತಾವ:
'ರೂಪಾಯಿಗೆ ಸೇರು ಬೆಣ್ಣೆ ಬಿಲ್ಲೀಗೆ ಸೇರು ಹಾಲು
ಮತ್ತ ನಾಕ್ಕಾಸು ಕೊಟ್ಟರ
ಚೀಲತ್ತುಂಬ ಅಕ್ಕೀ ಜ್ವಾಳಾಂತ.

ನನಗೀಗ ಎಲ್ಲಾ ತಿಳೀಲಿಕತ್ತsದ.
ಅದಕ್ಕs ನಾ ನಿಮಗ ಕೇಳ್ತೀನಿ
ಗಾಂಧೀ ಬಂದು ಸ್ವಾತಂತ್ರ್ಯ ತಂದು
ನಮ್ಮ ಜನಕ ಏನ್ ಸುಖಾ ಕೊಟ್ಟಾಂತ.

□ □

ಕಪ್ಪೆಚಿಪ್ಪು

ಮಿಂಚುಗಣ್ಣಿನ ಸುತ್ತ ಕುಣಿವ
ಅಣಿಮುತ್ತುಗಳು.
ಬೆಚ್ಚನೆ ತುಟಿಗಳ ಸುತ್ತ ನಲಿವ
ಅಣಿಮುತ್ತುಗಳು.
ತುಟಿಗಳಿಂದ ಚಿಮ್ಮಿ
ನುಡಿಮುತ್ತುಗಳಾಗಹೊರಟರೂ
ಆವಿ ತಣಿದು ನೀರಾದಂತೆ
ನೀರು ಘನಿಸಿ ಬರ್ಫಾದಂತೆ
ಮೌನ ಭೇದಿಸಲಾಗದೆ
ಮತ್ತೆ, ಮತ್ತೆ
ಕಪ್ಪೆಚಿಪ್ಪುಗಳಾಗುತಿವೆ !
ಆದರೂ
ಹೇಳುವ ಹೃದಯ
ಬಾಯ್ಬಿಡುತ್ತಲೇ ಇದೆ.
ಕೇಳುವ ಕಿವಿಗಳು
ಕಾತರಿಸುತ್ತಲೆ
ಇವೆ.

□ □

ಪ್ರಶ್ನೆ

ತಿಳಿಗೊಳದ ಮೇಲೆ ಅರಳಿದ
ತಾವರೆಯಂಥ
ಮುಂಜಲ್ಲಿ ಮಿಂದ ಮಲ್ಲಿಗೆ

ಹೂವಿನಂಥ
ಕೋಮಲ ಕಲ್ಪನೆಗಳನು
ಮೆತ್ತನೆಯ ಹೃದಯದಲಿ
ಹುದುಗಿಸಿಟ್ಟು
ನಿನ್ನ ಬರವನ್ನೇ ಎದುರು
ನೋಡುವ
ಕಣ್ಣಿಗೆ,
ನೀ ಕೊಡುವ ಕಾಣಿಕೆ
ಯಾವುದಿದ್ದರೂ
ಸ್ವೀಕರಿಸಿ,
ನಿನ್ನ ರೋಮ-ರೋಮವನು ನಾ
ಗೆದ್ದೇನು.
"ಸಖಾ,
ಕೊಟ್ಟು ನೋಡುವಿಯೇನು
ಒಮ್ಮೆ ನಿನ್ನ ಹೃದಯವನು ?"

□ □

● ಶಿವಾನಂದ ಹೊಂಬಳ

ಇವು ಬರೀ ಕವನಗಳಲ್ಲ

ಸಂತೆಯಲ್ಲಿದ್ದವನೊಬ್ಬ ಸಂತೆಯ ಕವನ ಬರೆದ.
ಚಿಂತೆಯಲ್ಲಿದ್ದವನೊಬ್ಬ ಚಿಂತೆಯ ಕವನ ಬರೆದ.
ದೇವಾ,
ಜೀವನವೆಂಬುದು ಕೇವಲ ಸಂತೆಯ ಚಿಂತೆಯೇ ?
ಅಥವಾ ಚಿಂತೆಯ ಸಂತೆಯೇ ?
ಈ ಸಂತೆಯ ಗದ್ದಲ ದಾಟಿ
ಚಿಂತೆಗಳ ಕಂತೆಗಳ ಬಿಸುಟಿ
ಶಾಂತತೆಯ ನೆಲೆಯ ಮೇಲೆ ನಿಂತು; ಅನಂತತೆಯ ಚಿತ್ರಣವು
ಎಂದಿಗೆ ? ಯಾರಿಂದ ಆಗುವದು ?
ಆ ಮಹಾಕವಿಯ ಉದಯವೆಂದಿಹುದು ?

ಜೀವನವೇ ಒಂದು ಮಹಾಕವನ !
ಈ ಕವನದಾದ್ಯಂತಗಳರಿತವರಾರು ?
ಇದರ ಮೂಲಕರ್ತೃವಾರು ?
ಆದಿ ಅನಾದಿಗಳ ಆಚೆಗಿನ, ಅನಂತನೆಂಬವನೊಬ್ಬ
ಇದ ಬರೆದನಂತೆ !
ಈ ಮಹಾಕವನ ಪೂರ್ಣ ಓದಿದವರುಂಟೆ ?
ಓದಿ ಅರ್ಥ ಮಾಡಿಕೊಂಡವರುಂಟೆ ?
ಇದೊಂದೇ ಕವನ ! ನಿಜವಾದ ಕವನ ! !
ಉಳಿದ ನಮ್ಮ ಕವನಗಳೆಲ್ಲ
ನಿಜದಿ ಕವನಗಳಲ್ಲ! !
ಆ ಮೂಲಕವನದ ಮೀಮಾಂಸೆಗಳೆಲ್ಲ ! ! !

□□

ಅಶೋಕ ಬಿರಾದಾರ

ಕಂದನ ಕೂಗು

ಕಂಡಲ್ಲಿ ಕೈ ಚಾಚಿ
ಅನ್ನ ಬೇಡುವ ಕಂದ
ನಿಲ್ದಾಣದಲ್ಲಿ ನಿಂತಾಗ
ಮಗುವೊಂದಕ್ಕೆ ಅದರಮ್ಮ ಹಣ್ಣು ಕೊಡಿಸುವಾಗ
ತನಗೂ ತಿನ್ನುವ ಆಸೆ.
ಆದರೆ ತನ್ನ ಅಮ್ಮನೆಲ್ಲಿ ?
ಕಂದನ ಕಣ್ಣಲ್ಲಿ ನೀರೂರಿತು.

ತನಗೂ ಒಬ್ಬ ಅಮ್ಮ ಇರುವಳೆ ?
ಕಂದನ ಕರುಳು ಅರಳಿತು
ಕಾಣುವ ತವಕ ಹೆಚ್ಚಿತು
ಅಮ್ಮsss ಎಂದು ಕಿರುಚಿತು.

ಎದುರಿನ ಹೆಣ್ಣು ಹಣ್ಣು ಕೊಡುತ್ತಿರುವಾಗಲೇ ಎಚ್ಚರ,
ಮಗುವು ದೈನ್ಯದಿಂದ ನೋಡುತಿರುವಾಗ
ಅವಳಲ್ಲಿ ಹಿಂದಿನ ಘಟನೆ ಸುಳಿಯಿತು,
ಆರುವರುಷದ ಹಿಂದೆ ಮದುವೆಗೆ ಮುಂಚೆ
ಮಾಡಿದ ಪಾಪದ ಶಾಪ ಈ ಮಗುವಿಗೆ.

ಮಮತೆ ಉಕ್ಕಿತು.
ಮತ್ತೊಮ್ಮೆ ಛೀ ಈ ಮಗುವು ತನ್ನದಲ್ಲವೆನುತಿರುವಾಗಲೇ
ಬಸ್ಸು ಬರಲು ಹೊರಟುಹೋದಳು.

ಮುಗ್ಧಕಂದ ಕೈಚಾಚಿ ನಿಂತಿತ್ತು ಭಿಕ್ಷೆಗಾಗಿ.
ಹೊಟ್ಟೆ ಹಸಿದಿರಲು ಬೇರೆಡೆಗೆ ಹೊರಟಿತು ರಕ್ಷೆಗಾಗಿ.

□ □

ಫಲಕದ ಬೆಲೆ

ಆ ದಿನ
ಎಲ್ಲಿಲ್ಲದ ಸಂಭ್ರಮ.
ಪ್ರಥಮವಾಗಿ ಪಾಸಾಗಿದ್ದಕ್ಕೆ
ಚಿನ್ನದ ಪದಕ ತೊಡಿಸಿ ಅಭಿನಂದಿಸಿದಾಗ
ಮುಗಿಲೇ ಎಟುಕಿದಂತಾಯ್ತು.
ಆದರೆ
ಈ ದಿನ !
ನೌಕರಿಗಾಗಿ ಪರದಾಟ
ಬಡಸ್ಥಿತಿಯಲ್ಲಿ ಅಣ್ಣನಿಗೆ ಕಾಮಾಲೆಯಾದಾಗ
ಇದ್ದ ಪದಕವೂ ದುಡ್ಡಾಗಿ ಹೋಯ್ತು.
ಈ ಯುಗದಲ್ಲಿ ಏನಿದ್ದರೇನು ?

□ □

● ಬಿ. ಜಿ. ದಾಸರ

ಮೂರು ಮುಖಗಳು

ನಮ್ಮ ಮನೆಯ ಅಂಗಳದಲ್ಲಿ
ಅಜ್ಜಿ ಹಚ್ಚಿದ ನಿರುಪಯೋಗಿ ಗಿಡಗಳು
ಆಳವಾಗಿ ಬೇರು ಬಿಟ್ಟಿವೆ.
ಕೀಳಬೇಕೆಂದು ಕೈ ಹಚ್ಚಿದರೆ
ಮುಳ್ಳು ನಟ್ಟು ರಕ್ತ ಸೋರಿಸಿಕೊಂಡಿದ್ದೇನೆ.
ಅಷ್ಟೇ ಅಲ್ಲ
ಅಜ್ಜಿಯಿಂದ ಛೀಮಾರಿ ಹಾಕಿಸಿಕೊಂಡಿದ್ದೇನೆ.

ಮುದ್ದಾದ ಮುದುಕಿ ಸತ್ತ
ಮೇಲಾದರೂ ಇವನ್ನ ನಿರ್ಮೂಲಗೊಳಿಸಬೇಕೆಂದರೆ
ನಮುವ್ವ ಅಜ್ಜಿ ಇನ್ನೂ ನಾಲ್ಕುದಿನ ಬದುಕಲೆಂದು
ಕಂಡಕಂಡ ದೇವರಿಗೆ ಹರಕೆ ಹೊರುತ್ತಿದ್ದಾಳೆ.

ಅಜ್ಜಿ ಹಾಗೂ ಅವ್ವ ಅಳಿದ ಮೇಲಾದರೂ
ಈ ಕಾರ್ಯ ಮಾಡಲೇಬೇಕೆನ್ನುವ ಛಲಕ್ಕೆ
ನಡುಕಹತ್ತಿದೆ.
ಯಾಕೆಂದರೆ
ಮುಂದೆ ಬರುವ ನಮ್ಮವ್ವನ ಮುದ್ದಿನ ಸೊಸೆ
ಎಲ್ಲಿ ನನ್ನನ್ನ ನಿಸ್ತೇಜಗೊಳಿಸುತ್ತಾಳೇನೋ ಎಂದು.

□ □

ಸ್ಥಿತಿ

ಸುತ್ತಲೂ
ಒಮ್ಮೆ ಕಣ್ಣು ಹಾಯಿಸಿದಾಗ
ಅಸ್ತವ್ಯಸ್ತಗೊಂಡ ವಾತಾವರಣದಲ್ಲಿರುವ

ಲಂಚಬಡಕರನ್ನ ವಿಶ್ವಾಸಘಾತಕರನ್ನ ಸಮಾಜದ್ರೋಹಿಗಳನ್ನ
ಕಂಡು ಮೂಗು ಮುಂಚ್ಚಿಕೊಳ್ಳುತ್ತೇನೆ
ಮತ್ತೊಮ್ಮೆ
ಮೈಸಡಿಲು ಬಿಟ್ಟು
ಲಂಚಬಡಕರನ್ನ ಸಮಾಜದ್ರೋಹಿಗಳನ್ನ
ಮೆಚ್ಚಿಕೊಳ್ಳುವ ಸಹೃದಯನಾಗುತ್ತೇನೆ.
ನಂತರ
ಅವಕಾಶ ಸಿಕ್ಕರೆ
ಯುನಿಫಾರ್ಮನ್ನೇ ಧರಿಸಿ ಯಾರ ಹಂಗೂ ಇಲ್ಲದೆ
ಅಸ್ತವ್ಯಸ್ತಗೊಂಡ ವಾತಾವರಣವನ್ನೇ ನಿರ್ವಹಿಸುವ
ನಿರ್ವಾಪಕನಾಗುತ್ತೇನೆ.

□ □

● ಸುನೀತಾ ಕುಲಕರ್ಣಿ

ಪ್ರತಿಧ್ವನಿ

ತುಂಡುತುಂಡಾಗಿ ಬಂದು
ಗುಂಪು ಕಟ್ಟಿ ಆರ್ಭಟಿಸಿ
ಆಗೊಮ್ಮೆ ಈಗೊಮ್ಮೆ
ನಗುವ ಈ ಮೋಡಗಳು
ಒಮ್ಮೆಲೆ ಒಡೆದು
ಹನಿಹನಿಯಾಗಿ ಭೂಮಿಗಿಳಿದು
ನೀರಾಗಿ ಹರಿಯುವುದನ್ನು
ಕಂಡರೆ, ನನ್ನಲ್ಲಿ ಉದ್ಭವಿಸಿ
ಬೆಳೆದು ಪ್ರತಿಧ್ವನಿಸುವ
ಒಮ್ಮೆಲೆ ಮೌನವಾಗಿ ರೋದಿಸುವ
ಭಾವನೆಗಳಿಗೆ ಅರ್ಥ ಸಿಕ್ಕಂತಾಗುತ್ತದೆ.

□ □

ಅಸ್ತಿತ್ವ

ಒಂಟಿ ಸಂಖ್ಯೆಯಾಗಿ ಬಂದು
ಬಂಧುಮಿತ್ರರ ಕೂಡುವಿಕೆ
ಕಳೆಯುವಿಕೆಗಳಿಂದ ಬೆಳೆದು
ಸಮಸ್ಯೆಗಳ ಭಾಗಾಕಾರ
ಗುಣಾಕಾರಗಳ ಮಧ್ಯ ಸಿಕ್ಕು
ಚಿಕ್ಕದಾಗುತ್ತ, ದೊಡ್ಡದಾಗುತ್ತ
ಶೇಷದಲ್ಲಿ ಬರೀ ಶೂನ್ಯವಾಗುತ್ತೇನೆ.

□ □

● ವಾಸುದೇವ ಶೆಟ್ಟಿ

ಸಮುದ್ರನ ಸನ್ನಿಧಿಯಲ್ಲಿ

ಸಮುದ್ರವೆ,
ಮನದ ಭಾವನೆಗಳಿಗೆ ರೂಹು ನೀಡಲಿಕೆಂದು
ನಾ ಬಂದೆ ನಿನ್ನ ತಡಿಗೆ.
ದಿಟ್ಟಿ ಎಟುಕದ ದೂರ ತಪ್ಪಿದ ನಿನ್ನ ಹರವು
ಮುಗಿಲ ಚುಂಬಿಸ ಹೊರಟ ಆ ನಿಲುವು
ನನ್ನಲ್ಲಿ 'ನಾನೊಂದು ಕಣ' ಎನಿಸಿತು.
ಕ್ಷಣಕ್ಷಣಕೂ ಕಲ್ಮಶವ
ದೂರ ತಳ್ಳುವ ನೀರ ನೀರೆಯರ ನರ್ತನ
ನನ್ನಲ್ಲಿ 'ನಾನೊಂದು ಕುಪ್ಪೆ' ಎನಿಸಿತು.

ಝಲ್ಲನೆ ಚಿಮ್ಮಿ ಎಳೆಎಳೆಯಡಾಗಿ ಬೀಳುವ
ತೆರೆಗೋಡೆಗಳ ಕಂಡು
(ವಿರೋಧಾಭಾಸ ಎನಿಸಿದರೂ)
ಉರಿಯ ಜ್ವಾಲೆಗೆ ಹೋಲಿಸುವಾಸೆ.
ನೇತ್ರರುಣ್ಣುವ ಈ ಜವಳಿಗಳ ಹೊಂಡದಿಂದ
(ತಿಮಿಂಗಲಗಳು ಇದ್ದರೂ ಪರವಾಯಿಲ್ಲ)
ನಿನ್ನೊಳಗೆ ನಾ ಸೇರುವಾಸೆ.

ಬದುಕ ಅಗ್ನಿಪರೀಕ್ಷೆಯಲ್ಲಿ ನಾನೋ ತ್ರಿಶಂಕುವೆನಿಸಿ
ಸಾಯಲಾಗದೆ ಬದುಕುತ್ತಿರುವ ಅನುಭವ.
ನಿನ್ನ ಎತ್ತರ ಬಿತ್ತರಗಳ ನಾನಾವರಿಸುವ ಆಸೆ
ಬರೀ ಢೋಂಗಿಯದಲ್ಲ.
ಅದಕ್ಕೆಂದೇ ಅಂತರಂಗದ ಆಳದಲ್ಲಿ ಅಚ್ಚೊತ್ತಿದ
ಸ್ತನ, ನಿತಂಬ ಮೊದಲಾದವುಗಳ ಚಿತ್ರಗಳು

ತ್ರಿಕೋನ ನಕ್ಷತ್ರ ಪಿರ‍್ಯಾಮಿಡ್ಡುಗಳಾಗಿ
ಬದಲಾಗುತ್ತಿವೆ.
ಹೌದು, ನೋಡು
ನಿನ್ನ ಸನ್ನಿಧಿಯಲ್ಲಿ ಬಾವಿಕಪ್ಪೆಗಳಿಗೆ ಸ್ಥಾನವಿಲ್ಲ.

□ □

ಅವಸ್ಥೆ

ನಾನೊಬ್ಬ ಕಲಾವಿದನಾಗಿ
ನನ್ನ ಕೇರಿಯ ಹುಡುಗರ ಚಿತ್ರ ಬಿಡಿಸತೊಡಗಿದರೆ
ಚೂಪಾಗಿ ಕೆತ್ತಿದ ಪೆನ್ಸಿಲ್ಲು
ಅವರ 'ಸುಂಬಳ ಸುರಕ' ಮೋರೆಯ ಅಂಟಿನಲ್ಲಿ
ಅದ್ದಿ ಗಲೀಜಾಗುವುದು.
ಹೇಗೋ ಮಾಡಿ ಮುಂದುವರಿದರೆ
ಬೆತ್ತಲೆ ಬೆನ್ನುಹೊಟ್ಟೆಗಳಗುಂಟ
ಹೊರಟ ಪೆನ್ಸಿಲ್ಲು ಹೊಕ್ಕುಳದ ಹೊಂಡದಲ್ಲೋ
'ಸ್ಪೀಡ್ ಕಟರ್ಸ್'ಗಳಂತಿದ್ದ ಪಕ್ಕೆಲಬುಗಳ ನಡುವೆಯೋ
ಇಲ್ಲ, ದೃಷ್ಟಿಯನಿಡಲು ಹೋದಾಗ
ಕುಳಿಬಿದ್ದ ಕಣ್ಣುಗಳ ಆಳದಲ್ಲೆಲ್ಲೋ ಸಿಕ್ಕಿ
ಮೊನೆ ಮುರಿದು ಮೊಂಡಾಗುವುದು.

ಹೋಗಲಿ, ನನ್ನೂರವರ ಕಥೆಯಾದರೂ ಹೇಳೋಣ
ಅಂದುಕೊಂಡರೆ
ಉತ್ತಿದ್ದು ಬಿತ್ತಿದ್ದು ಒಕ್ಕಿದ್ದು ಮೆಟ್ಟಿದ್ದು
ಬೋರ್ ಅನ್ನಿಸಿದರೂ
ಕಥೆಯು ರಸಘಟ್ಟ ಗಂಗಿಯ
ಮರುಮದುವೆಯ ಪ್ರಸಂಗಕ್ಕೆ ಬಂದಾಗ
'ನಾಯಕನ ಬೈಕಿನ ಡರ್sss' ಸದ್ದು
ನಿಮಗೆ ನಾನನ್ನುವುದು ಕೇಳಿಸದಂತೆ ಮಾಡಬಹುದು.
ಹಿಂದಕ್ಕೆ ತಳ್ಳಿಹೋದ ಹೊಗೆಯು
ಕಣ್ಣಿನಲ್ಲಿ ನೀರಾಡುವಂತೆ ಮಾಡಬಹುದು.

ಎಲ್ಲಾ ಬಿಟ್ಟು ನನ್ನ ಕೇರಿಯವರ ಕುರಿತು
ಕಾವ್ಯನಾದ್ರೂ ಬರೆಯುವಾ ಅಂದ್ರೆ
ನಮ್ಮ ಗದ್ದೆ ಬಯಲಿನ ಹುಡಿಯ ವರ್ಣನೆ ಮಾಡುವಾಗ
ಇದ್ದೊಂದು ಅಂಗಡಿಯ ವರ್ಣನೆ ಮಾಡುವಾಗ
ರಾತ್ರಿ ದನ ಬಿಟ್ಟು ಬೇರೆಯವರ ಗದ್ದೆಯನ್ನು
ತಿನ್ನಿದ್ದು ವರ್ಣಿಸುವಾಗ
ನಾಗಪ್ಪ ಹೆಣ್ತಿ ಬಿಟ್ಟು ಮುದುಕಿ ಮುಂಡೆಯ
ದೋಸ್ತಿ ಮಾಡಿದ್ದು ಹೇಳುವಾಗ
'ಊರ ಅಭಿವೃದ್ಧಿ ಸಮಿತಿ'ಯ ವಿಷಯಕ್ಕೆ ಬಂದಾಗ
ನಮ್ಮ ಕೇರಿಯ ಶಾಲೆಯ ಪ್ರಕರಣ ಹೇಳುವಾಗ
ರಾಂ ಗೌಡನ ಕೋಣವನ್ನು ಹೊಡೆದು ಕೊಂದದ್ದನ್ನು ಹೇಳುವಾಗ
ಗೇರು ಪಕ್ಕಲಿನ ಬಿಡಾರದ ಅಧ್ಯಾಯ
ಇನ್ನೂ ಕೆಲವು ಪ್ರಮುಖ ಸಂದರ್ಭಗಳ
ವರ್ಣನೆಗಳಲ್ಲೆಲ್ಲ ಈ ಸುಡಗಾಡ ಪೆನ್ನು
ಮುದ್ದೆಮುದ್ದೆಯಾಗಿ ಶಾಯಿಯನ್ನು
ಕಾರಿ, ಬರೆಯುವುದೇ ಬೇಜಾರಾಗಿ
ಮಾಡಿ ಬಿಟ್ಟದೆ.

□ □

● ಚೆನ್ನಬಸವ ಮಂದ್ಲಿ

ಲೇಖನಿ

ನಾನೂ ನನ್ನ ಲೇಖನಿಯೂ ಜಗಳಕ್ಕಿಳಿದು
ಅನೇಕ ಕವನಗಳನ್ನು ಕೊಂದಿದ್ದೇವೆ.
ಇಲ್ಲಾ ಕುಸುಮಗಳನ್ನು ಸುಮ್ಮನೇ ಬಿಟ್ಟಿದ್ದೇವೆ.
ಕುಸುಮ ಕಂಪನ್ನು ಮೀರಿಸುವ
ನನ್ನ ಕವನಗಳು
ಇಲ್ಲಾ ಕವನಲೋಕದಲ್ಲೂ ಸಿಗದಂತ
ನನ್ನ ಕುಸುಮಗಳು
ನನ್ನನ್ನು ಚಿರಮರಣಿಯನ್ನಾಗಿಸಿವೆ.
ಹೌದು
ಹಣವಿಲ್ಲದವನ ಮನೆಯ ಹೆಣದಂತೆ
ನಾನು ಯಾವಾಗಲೂ ಸತ್ತಿರುತ್ತೇನೆ,
ಲೇಖನಿಯ ಕುಸುಮಗಳ ಕಂಪಲ್ಲಿ ಕರಗಿ.

□ □

ಬಡಬಡಿಕೆ

ನಿನ್ನೆಯ ಅಜೀರ್ಣ
ನಾಳೆಯ ಹಸಿವುಗಳನ್ನು ಹೊತ್ತ
ಹೃದಯ ತಲೆಗೆ ಕೇಳುತ್ತದೆ:
ಮೇಲಿಂದ ಮೇಲೆ ಮುಖ
ಕಪ್ಪಿಟ್ಟುಕೊಳ್ಳುವುದೇಕೆ ?
ಹೊತ್ತಾದರೂ ಮಲಗದ ತಲೆ
ನಾನೊಂದು ದಿನ ಹತ್ತಾರು ನಕ್ಷತ್ರಗಳಾಗಿ
ಒಡೆದರೆ ಅಂದು
ಅಮಾವಾಸ್ಯೆಯಾಗಿರಬೇಕು,
ಚಂದಪ್ಪನೆದುರು ಅಳುತ್ತ ಕೂಡದೆ

ಜಿಗಿದಾಡಬೇಕು ಎನ್ನುತ್ತದೆ.
ಹೃದಯ ಹೊರಳಾಡುತ್ತದೆ
ಹೊರಬರುತ್ತದೆ
ಚಂದ್ರನೆದುರು ಬೆತ್ತಲಾಗುತ್ತದೆ.
ಮುಖ ಕಪ್ಪಾಗುತ್ತದೆ
ತಲೆ ತೆಪ್ಪಗಾಗುತ್ತದೆ.

● ವ್ಹಿ. ಬಿ. ಹಿರೇಮಠ

ಮಾನವಾ ನಿನ್ನುದ್ಧಾರವೆಷ್ಟಾಯಿತು

ಬೆಳಗಾಯಿತೆಂದರೆ ಹೊಸ ಸುದ್ದಿಗಳ
ಹರಡಿ ಹೊಸ ಸಂಶೋಧನೆಯನ್ನು
ನಡೆಸಿ ನಾಗರಿಕತೆಯತ್ತ ಸಾಗುತ್ತಿದ್ದೆವೆ.

ತ್ರಿಕಾಲಜ್ಞಾನಿಗಳ ಕಾಲ ಹಿಂದೆಗೆದು
ವಿಜ್ಞಾನಿಗಳ ಕಾಲ ಮುಂಬಂದು
ಆಕಾಶದಲಿ ಹಕ್ಕಿಯಂತೆ ಹಾರುತ್ತ
ನೀರಿನೊಳು ಮೀನಿನಂತೆ ಈಸುತ್ತ
ಭೂಮಿಯ ಮೇಲೆ ಗಾಳಿಯಂತೆ ತಿರುಗುತ್ತ
ಮುಂದೆಮುಂದೆ ಸಾಗುತ್ತಿದ್ದೇವೆ.

ಕೆಮ್ಮುಗಿಲ ಪುಸ್ತಕದಿ ಏನೇನೋ ಅರಸುತ್ತ
ದೃಷ್ಟಿಯನು ಬಾನ್ನತಟದವರೆಗೂ ಹರಿಬಿಟ್ಟು
ಬಾನಿನಾಳವ ಕೆದಕುತ್ತೇವೆ.
ಆದರೂ
ಹಸಿವು ತೃಷೆಗಳು ನೀಗಿಲ್ಲ.

ಬಡವನೊಡಲಿಗೆ ಹಿಡಿ ಅನ್ನ ದೊರೆತಿಲ್ಲ.
"ಮಾನವಾ ನಿನ್ನುದ್ಧಾರವೆಷ್ಟಾಯಿತು ?"
ಎಂಬ ಪ್ರಕೃತಿಯ ಪ್ರಶ್ನೆಗೆ ಉತ್ತರವನ್ನು
ಹುಡುಹುಡುಕಿ ಬೇಸತ್ತಿದ್ದೇವೆ.

□□

ಶೂನ್ಯ

ಬಟ್ಟಬಯಲಿನ ಮಧ್ಯೆ
ತಾಪ ಕೋಪಗಳ ಮೆಟ್ಟಿ
ಎದೆಯಗಲ ಮುಗಿಲಗಲವಾಗಿ
ನಿಂತಿಹುದು ಅರಿವಿನ ಬೆಟ್ಟ.

ಕಾಲದೇಶಗಳು ಅಳಿದು
ರಾಜಋಷಿಗಳ ಬದುಕಳಿದು
ಸತ್ವ ಬಿತ್ತಿದ ತತ್ವಗಳು
ಜಗದ ತುಂಬೆಲ್ಲ ಉಳಿದು
ಅರಿವಿನ ತಿಳಿವಿನ ಬೆಳಕು ನೀಡುತ್ತಿವೆ.

ಬಯಲೊಳಗಿದ್ದು ಉಸಿರುಗಟ್ಟಿಹುದೆಮ್ಮ ಬದುಕು.
ಜ್ಞಾನವ ಪಡೆದು ಅಜ್ಞಾನ ತಾಮಸದ
ಬುರುಕಿಯು ಹೊತ್ತಿಹುದು ಜಗವು.
ಮೀರಬೇಕು ಸಂಕೋಲೆಯು ಕಳಚಬೇಕು
ಅರಿವಿನ ತಿಳಿವಿನ ದಾರಿಯು ಹಿಡಿದು
ಶೂನ್ಯದಲಿ ತಿಳಿದುಳಿಯಬೇಕು.

□ □

● ಸದಾಶಿವ ಮರ್ಜಿ

ಹಣತೆ

ಅಂತಿಂಥದಲ್ಲ ಈ ಹಣತೆ.
ಇದು ಒಂದಲ್ಲ ಎರಡಲ್ಲ,
ಹತ್ತು ಹಲವು ವರುಷ
ನನ್ನೊಡನಿದ್ದು
ಜೀವಕ್ಕೆ ಬೆಳಕು ನೀಡಿದ
ಹಣತೆ.
ಬತ್ತಿಯು ಹೊಸೆದು ಎಣ್ಣೆಯು ಹೊಯ್ದು
ಅನುಭವದ ಕಡ್ಡಿಯು ಗೀರಿ ಹಚ್ಚಿದರೆ
ಬೆಳಕೇ ಬೆಳಕು ಮನೆಯೆಲ್ಲ.
ನನ್ನ ಬಾಳಿಗೆಲ್ಲ.
ಆದರೆ ಇಂದು
ಅದೇ ನನ್ನ ಹಣತೆ ಒಡೆದು
ಚೂರುಚೂರಾಗಿದೆ.
ಹಿಂದೆ, ಎಂದೆಂದೂ ಉಮ್ಮಳಿಸದ
ದುಃಖ ಕಟ್ಟೆಯೊಡೆದಾಗ
ಬಿದ್ದ
ಕಣ್ಣೀರ ಹನಿಗೆ ಚೂರಾದ
ಹಣತೆ, ಕರಗಿ ಮಣ್ಣಾದಂತೆ
ಮತ್ತೆ ಬೆಳಕು ತಾರದಂತೆ
ಕಣ್ಮರೆಯಾಗಿದೆ.

□□

ನಮ್ಮಿರುವು

"ನಾನು ಬಡವ, ಆಕೆ ಬಡವಿ
ಒಲವೇ ನಮ್ಮ ಬದುಕು"

ಮತ್ತೆ
ಅದೇ ಹಳೆಯ ರಾಗ,
ಹಳತ ವೀಣೆಯ ಮೀಟಿದ
ನಾದ.
ಪ್ರೀತಿ ಪ್ರೇಮ ತಾರುಣ್ಯದಾ
ಮಜಲು
ಅದು ಬಾರಿಸಿದಂತೆ ತಾಳ,
ಅದರೊಂದಿಗೆ ಹೆಜ್ಜೆಯೇ ಇಲ್ಲ.
ಜೀವನ ರಂಗುರಂಗಿನ
ಬದುಕೆ ?
ಹುಚ್ಚುಹಿಡಿಸುವ ಪ್ರಶ್ನೆಗಳು
ಅದೇ ಗೊಂದಲ, ಅರೆನಿದ್ರೆ
ಅರೆಗನಸು–
ಇನ್ನೂ ವಾಸ್ತವ ಬೇರೆ
ಹೀಗೆ 'ನಾನೂ' 'ನೀನೂ'
ಎಂದೆಂದೂ !
ಕೊಚ್ಚೆಯ ಬಾಳಿನ ಜೋಡೀಹಕ್ಕಿ.
ನಾವು
ಮುರುಕುಹಂಚಿನ ವಾಸ್ತವವೇ
ನಮ್ಮ ಗೂಡು.
ಹರುಕು ಬಿರುಕು
ಅದೇ ನಮ್ಮ ಬದುಕು.

□ □

● ಗಿರಿಜಾ ಅಣೆಪ್ಪನವರ

ಪ್ರವೇಶಗಳು

ಪ್ರಯತ್ನಿಸುತ್ತಿದ್ದೇನೆ
ಹೊರದಬ್ಬಲು.
ಪ್ರಯತ್ನಿಸುತ್ತಿವೆ
ಒಳನುಗ್ಗಲು.
ಬಿಟ್ಟ ಬಿರುಕುಗಳೆಲ್ಲ
ಚೀಪುಗಲ್ಲುಗಳ ತುರುಕಿ
ಬಂದೋಬಸ್ತ್ ಮಾಡಿ
ಕೀಲಿ ಜಡಿದಿದ್ದೇನೆ.
ಮುಚ್ಚಿದ್ದ ಹೃದಯಕವಾಟದ
ಮೇಲೆ ಮತ್ತೆ ಅಚ್ಚೊತ್ತಿವೆ
ಈ ಬೆರಳುಗಳು ತಟ್ಟುತ್ತಿವೆ
ಈ ತಲೆಗಳು ಕುಟ್ಟುತ್ತಿವೆ.
ತಟಸ್ಥ ಬಾಗಿಲ ಹೊರಗೆ
ನೂಕುನುಗ್ಗಲು.
ನುಗ್ಗುತ್ತಿವೆ ಕುಗ್ಗಿಸುತ್ತಿವೆ
ಎದೆಗುಂದಿಸುತ್ತಿವೆ.
ಹೊರಕ್ಕಟ್ಟಿದಷ್ಟೂ ಬೆನ್ನಟ್ಟಿ
ಅಟ್ಟಿಸಿಕೊಂಡು ಬರುತ್ತಿವೆ
ಪ್ರವೇಶಗಳು.

□□

ಕವಿತೆ ದೂರದಾಗ

ಎಲ್ಲಿರಿದ್ದೂ ಎಲ್ಲಿ ಇದ್ದೂ
ನಾ ತಬ್ಬಲಿ.
ನೀನೂ ದೂರ ಹೋದರೆ
ನಾನ್ಯಾರ ತಬ್ಬಲಿ.

ನಿನ್ನ ಕೈಗೂಸಾಗಿ ಬೆಳೆದ ನಾನು
ನಿನ್ನನ್ನೇ ಹೆತ್ತೆ ಹೆಸರಿಟ್ಟೆ
ಓ ಬಾರೆ ನನ್ನ ಕವಿತೆ.
ಚಿಂತೆಗಳ ಚಿಪ್ಪು ಹೊತ್ತುನಿಂತಾಗಲೂ
ನೀ ನೀಡುತ್ತಿದ್ದ ಮುತ್ತು ಮತ್ತೆ ಮತ್ತೆ
ಮಗಳಾದೆ ತಾಯಾದೆ
ನೊಂದ ಹೃದಯಕ್ಕೆ ಸಂಗಾತಿಯಾದೆ.
ಬೆಂದಮನಕ್ಕೆ ಎರೆದ ಹಾಲಾದೆ.
ಕೊಂದ ಭಾವನೆಗೆ ಸೆಲೆಯೊಡೆಸಿದೆ.
ಬದುಕಲೆಳಸುವ ಬಾಳ್ಗೆ ದೀವಿಗೆಯಾದೆ.
ಏನಿದ್ದೆ ! ಏನಾದೆ !!
ಏಕಿಂತು ದೂರಾದೆ ?
ಈ ಮೌನಕೆ ನಾ ಬಲಿಯಾದೆ.
ಶರಣಾಗುವ ನನಗೆ ಚರಣಾಗಿ ನಿಲ್ಲು.
ಕೇಳಿನ್ನ ಸೊಲ್ಲು
ಏ ದೂರಾದ ಕವಿತೆ.

□ □

ಏನೇನೋ ಆಸೆ

ಏನೇನೋ ಆಸೆ.
ಮೊಗ್ಗರಳಿಸಿ ಮುಡಿವ
ಇಡುವ ಅಡಿಯೊಡ
ನೊಡಗೂಡಿ ನಡೆವ
ತುಂಬಿದ ಮಧುಪಾತ್ರೆಯನೇ
ಎತ್ತಿಕುಡಿವ
ಕೊನೆಗೆ ನಿನ್ನಲ್ಲೆ, ಎದೆಯಲ್ಲಿ
ಎಡೆ ಪಡೆವ
ಇನ್ನೂ.........
ಏನೇನೋ ಆಸೆ.
ಹೇಳಬಾರದ, ಹೇಳಲಾಗದ
ಹೊನಲಿಗುಕ್ಕುಕ್ಕಿ ಹರಿಯುವಾಸೆ.
ಆಸೆಗಳಿಗಾಸೆ ಹೊಸೆಯುವಾಸೆ.
ಹೋಗಲಿ
ಹುಚ್ಚಿ ನಾನು.
ಹರಿವ ನದಿ ತಿರುಗಿಬಾರದು.

□ □

● ಡಿ. ಬಿ. ಗಡೇದ

ಜೀವನದ ತಿರುಳು

"ಮಮಕಾರ ತಪ್ಪು ಅಭಿಮಾನ ಬೇಕು."
ಪ್ರತಿಯೊಬ್ಬ ಜೀವಿಗೂ ಬೇಕು ಜ್ಞಾನ.
ಜೀವನದ ತಿರುಳನ್ನು ಅರಿಯಬೇಕು.
ಆಗಲೇ ನಿಜವಾದ ಜೀವನದ ಬದುಕು.

ಜನನ ಮರಣಗಳ ಮಧ್ಯೆ ವಾಸಿಸಿ
ಕಳಿತ ಕವಳಿ ಹಣ್ಣಿನಂತೆ ಕೊಳೆತು ಹೋಗುವ
ನಶ್ವರವಾದ ಈ ಶರೀರ ಅಳಿದುಹೋದರೂ
ಅಮರವಾಗಿ ಉಳಿಯುವ ನಾಮವೊಂದೆ ವಾಸಿ.

ಸತ್ಯಾಸತ್ಯತೆಯನ್ನರಿತು ತಿಳಿದೂತಿಳಿದು
ಮಾಡಬಾರದ್ದನ್ನು ಮಾಡಿ 'ನ್ಯಾಯ ನೀತಿ
ಧರ್ಮ' ಸೃಷ್ಟಿ ನಿಯಮಗಳ ವಿರುದ್ಧ ನಡೆದು
ಸತ್ತು ಹೋಗುವ ಮುನ್ನ ತೆರೆದು ನೋಡೊಮ್ಮೆ ಕಣ್ಣ.

□ □

● ಎಸ್. ವ್ಹಿ. ಬಿರಾದರ

ಕರಾಳ ನೆರಳು

ಎತ್ತ ತಿರುಗಿದತ್ತ ಮರೆಯಾಗದೆ
ಧುತ್ತೆಂದು ನಿಂತಿರುವೆ ಎದುರಿಗೆ
ದಿನ್ನೆಯಿಂದ ಬೆಟ್ಟದ ವರೆಗೆ
ಹೆಣೆದುಕೊಂಡುರಿವಿ ನಿನ್ನ ಇಂದ್ರಜಾಲ.
ಬೆಳೆದು ನಿಂತಿಹೆನೆಂಬ ಗರ್ವದಿಂದ
ಎಳೆದು ತಿನ್ನುತಿರುವಿ ಕಣಜೀವಿಯಿಂದ
ಧಾರಾಕಾರಿಯಾಗಿ ಬಿದ್ದ ಹನಿಯಿಂದ
ದಾರಿ ಕಾಣದಂತೆ ಬೆಳೆದು ನಿಂತಿದೆ.
ಮೇಲಕ್ಕೆದ್ದಿರಿವಿ ನಿನ್ನ ಕೆಳಗಿದನು ಮೆಟ್ಟಿ
ಅರಿವಿಲ್ಲದೆ ಢಾಳವಾಗಿ ನಿಂತಿರುವಿ ತುಂಬ
ನಿನ್ನ ಕರಾಳ ನೆರಳಿನ ಕೆಳಗೆ ಬೆಳೆದು
ಹುಳು ಹುಲ್ಲೆಯಾಗಿ ಚಿಗುರಿನಿಂತಿದೆ.
ನೊಂದು ಬೆಂದು ನಿತ್ಯ ನಿನ್ನಡಿಯಲಿ
ಎದ್ದುನಿಂತಿವೆ ಕೋಟಿಕೋಟಿ ಬೆಳೆದು
ರಕ್ಕಸ ಹಿಂಡಿದ ಮಾಂಸದ ಹಾಗೆ
ಸುರಿಯುತಿದೆ ಹನಿಹನಿ ನೆತ್ತರ ಭೂಮಿಗೆ.
ನೆತ್ತರ ನೆತ್ತರ ಕೂಡಿ ಬೆಳೆದು
ರಕ್ತ ಬೀಜವಾಗಿ ತನ್ನ ಮೈ ತಳೆದು
ಎಲ್ಲರನ್ನೂ ನುಂಗಿ ಸೆಳೆದ
ಸೊಲ್ಲಡಗಿದೆ ನಿನ್ನೀ ಅವತಾರಕ್ಕೆ.
ಇಂದು ನೀ ಖಂಡಗ್ರಾಸ ಮುತ್ತಿದಂತೆ
ನಿನ್ನ ನೋಡಿದರೆ ಕಣ್ಣು ಕಾಣದಂತೆ
ಸುತ್ತಲೂ ಮುಸುಕಿರುವ ಕರಾಳನೆರಳಿವೆ
ಕೊಳೆಯುತ್ತಿರುವೆ ಹುಲ್ಲಾಗಿ ನೆಲದೊಳಗೆ.
ಬೇಕು ಬೇಡಂದಿನಗಳ ಬದಿಗಿರಿಸಿ
ಹೆರವರ ಹೇಸಿಗೆ ಕೈಯಿರಿಸಿ

ಲಾಲಸೆಯಿಂದ ಬೆಳೆಯುತ್ತಿರುವ
ನಿನ್ನೀ ನಿರ್ನಾಮ ಎಂತು ಕಾಣುವೆ ?

□□

ಉಪವಾಸ-ಅಹಿಂಸೆ

ಓ! ಮಹಾತ್ಮ ಪಿತಾಮಹನೆ
ನಿನಗಿದೋ ನಮಸ್ಕಾರ
ಅಂದು ನೀನು ಮಾಡಿದ ಉಪವಾಸ.
ಹಿಂದೂ–ಮುಸ್ಲಿಂ ಐಕ್ಯತೆಯ ಸಹವಾಸ.
ಇಂದು ನಾವು ಮಾಡುವ ಉಪವಾಸ.
ಬೆನ್ನುಹೊಟ್ಟೆಯ ಐಕ್ಯತೆಯ ಸಹವಾಸ.
ಅಂದು ನಿನ್ನ ಉಪವಾಸಕ್ಕೆ ಸತ್ಕಾರ
ಇಂದು ನಮ್ಮ ಉಪವಾಸಕ್ಕೆ ತಿರಸ್ಕಾರ.
ಅಂದು ನೀನೊಮ್ಮೆ ಉಪವಾಸ ಇದ್ದರೆ
ಭಾರತೀಯರೆಲ್ಲರೂ ಓಗೊಟ್ಟರು.
ಇಂದು ಭಾರತೀಯರೆಲ್ಲರೂ ಉಪವಾಸ.
ಒಬ್ಬರದೂ ಕರೆ ಕೇಳಿಸುವದಿಲ್ಲ—
ನಿನ್ನ ಉಪವಾಸ ಕಟ್ಟುನಿಟ್ಟಾಗಿ ಆಚರಿಸಿದೆವು
ಹೊಟ್ಟೆಗೆ ಹಿಟ್ಟು ಇಲ್ಲದುದಕ್ಕಾಗಿ.
ನಮ್ಮವರೂ ಉಪವಾಸ ಮಾಡುತ್ತಾರೆ
ಪತ್ರಿಕೆಯ ಮುಖಪುಟದ ಆಸೆಗಾಗಿ.
ನೀನು ಹಾಕಿದ ಅಹಿಂಸೆಯ ಮಾರ್ಗದಲಿ
ನಿನಗೆ ಕಾದಿತ್ತು ಗುಂಡಿನ ಗುರಿ.
ನಮ್ಮವರು ತುಳಿಯುವ ದಾರಿಯಲಿ
ಕಾದಿದೆ ಸಮಸ್ಯೆಯ ಬೇಲಿ.
ಸಮಸ್ಯೆಯ ಪರಿಹಾರಕ್ಕಾಗಿ
ಲಾಠಿ ಅಶ್ರುವಾಯು ಗುಂಡು
ಸಮಸ್ಯೆ–ಜನರಹಿತ ರಾಜ್ಯಕಟ್ಟಲು
ಕಂಕಣಬದ್ಧರಾಗಿ ನಿಂತಿರುವರು.
ಅಹಿಂಸೆಯ ಮಾರ್ಗ ಹಿಡಿದ ನಿನ್ನ ದೇಶದಲ್ಲಿ
ತಾಂಡವವಾಡುತ್ತಿದೆ ಹಿಂಸೆ.
ನೀನು ಮತ್ತೊಮ್ಮೆ ಅವತರಿಸಿದರೆ
ಮತ್ತೆ ನಿನಗೆ ಕಾದಿಹುದು ಗುಂಡಿನ ಗುರಿ.

□□

● ಶಿವಲೀಲಾ ನೆಲವಿಗಿ

ಒಂಟಿಧ್ವನಿ

ಪದವಿಗಳನ್ನು ಹೊತ್ತು
ಬಾಳಿನಲಿ
ತುಳಿಯಬೇಕಿನ್ನು ಬಲುದೂರ ದಾರಿ,
ನಡೆದರೇನು ಬೇಸರದ ಬದುಕು.
ಆದರೆ
ಹೊರಬೇಕು ಬಾಳನೊಗದ ಭಾರ.

ಎಲ್ಲೋ ಕುಳಿತು ಏನೆಲ್ಲ ಓದಿ
ಎಲ್ಲೆಲ್ಲೂ ಮಜಾ ಮಾಡಿದ್ದಾಯ್ತು.
ಮಳೆ–ಬಿಸಿಲು ಹಸಿವು–ನೀರಡಿಕೆ
ಸಹಿಸಿ
ತಾಯ್ತಂದೆಯರ ಹಣ ಖರ್ಚು ಮಾಡಿದ್ದಾಯ್ತು.

ವಿದ್ಯೆ ಮುಗಿಸಿ ಬಂದು
ಹಾಕಿದ್ದಾಯ್ತು ಹಲವಾರೆಡೆ
ಅರ್ಜಿ.
ಹಿಡಿದೆವು ಮತ್ತೆ ಕೆಲವರ
ಮರ್ಜಿ.
ಕೈ ಬಿಸಿ ಮಾಡಿ ಎಂದಾಗ
ನಾನಾದೆ ಖುರ್ಜಿ.

ಕಣ್ಣುಗಳು ಒಳಸೇರಿ
ಮೂಳೆಗಳು ಮೇಲ್ಕಾಣಿಸಿ
ತುತ್ತು ಕೂಳಿಗೆ ಕೈ ಚಾಚುವ
ದೇವನ ಈ ಆಟ
ನನಗೀ ಪರದಾಟ.

ಕನ್ನಡಿ ಒಡೆದಂತೆ ಬಾಳು
ಹನ್ನೆರಡು ಹೋಳಾಗಿ
ಕಣ್ಣೀರ ಕೋಡಿ ಹರಿದಾಗ
ಅಂಜದಿರು ಎಂದಿತು
ಒಂಟಿತನದ ಒಳಗಿನ ಮತ್ತೊಂದು ಧ್ವನಿ.

□ □

● ಶಂಭು ಮೇರವಾಡೆ

ಅಲ್ಲಿ

ಇಂದು ಶುಭಸಮಯದಲ್ಲಿ
ನನ್ನ ಕೈಯಲ್ಲಿಯ ಪುಸ್ತಕದಲ್ಲಿ
ಇತ್ತು ಕಣ್ಣು ಅಕ್ಷರಗಳಲ್ಲಿ
ನನ್ನ ಮನ ಹಾರುತ್ತಿತ್ತು ಆಕಾಶದಲ್ಲಿ.
ಇಂದು ಆಕಾಶದ ಚಂದ್ರಮನಲ್ಲಿ
ನನ್ನೀ ಮನಸ್ಸು ಹರಿಯುತ್ತಿತ್ತು ಅಲ್ಲಿ.
ಇಂದಿನ ಚಂದ್ರಮನ ಸ್ಥಾನದಲ್ಲಿ
ನನ್ನವಳು ಇದ್ದಳು ಅಲ್ಲಿ.

□ □

ವ್ಹಿ. ಎಸ್. ವಾಳಿ

ಬೆಳಗು

ಬೆಳ್ಳಿ ಮೂಡಿತು
ಕೆಂಪು ಹರಿಯಿತು
ಬೆಳಗು ಬಯಲನು ತುಂಬಿತು
ಮಂಜು ಮುಸುಕಿತು
ಮುತ್ತು ಹೊಯ್ಯಿತು
ಬಿಂಬ ಅದರಲಿ ಮೂಡಿತು.

ನೀಲ ಸದಮಲ
ಜಲವು ಕಲಕಲ
ಕಮಲ ಪರಿಮಳ ಹೊಮ್ಮಿತು.
ನಿವಿಲು ನಿರ್ಮಲ
ನಡೆಯು ಕೋಮಲ
ಪಿಕವು ಮಂಗಲ ಹಾಡಿತು.

ಶಿಲ್ಪ ಚೇತನ
ಪೂಜೆ ನೂತನ
ರಾಜಿ ಕಾರ್ಯವು ನಡೆಯಿತು
ದುಂಬಿ ಮೊಳಗಿತು
ಗಂಟೆ ನಲಿಯಿತು
ಬೆಳಗು ಬಯಲನು ತುಂಬಿತು.

□ □

ಹಾಳು ಹಂಪೆ

ಹಂಪೆ ಹಂಪೆ ಹಂಪೆ ಹಂಪೆ
ಇಂದು ಏಕೆ ಆದೆ ಕೊಂಪೆ ?

ನಿನ್ನ ಪುತ್ರ ರಾಮದೂತ
ಚಿರಂಜೀವಿ ಆಂಜನೇಯ
ರೆಂಕೆ ಪಡೆದು ಲಂಕೆ ಸುಟ್ಟ
ಎಲ್ಲಿ ಹೋದ ಕಪಿಧ್ವಜಾ ?

ಹುಕ್ಕ-ಬುಕ್ಕ ಪ್ರೌಢ ಕೃಷ್ಣ
ರಾಯರನ್ನು ಹೆತ್ತ ನೀನು
ಸಕಲಲೋಕಕೆಲ್ಲ ದಾತೆ
ಮಹಾಸಾಧ್ವಿ ವೀರಮಾತೆ.

ಬೆಳಗಿ ದಿಬ್ಬ ನಾಡಹಬ್ಬ
ನಾಡಿನಲ್ಲಿ ಮೆರೆಯುತ್ತಿತ್ತು
ಲಕ್ಷಲಕ್ಷ ಲಕ್ಷದೀಪ
ವಿಜಯನಗರ ನಾಡಿನಲ್ಲಿ.

ಕಲ್ಲಿನಲ್ಲಿ ಜೀವ ತುಂಬಿ
ಭಂಗಿಯಲ್ಲಿ ಕುಣಿಯು ಹೇಳಿ
ನಿನ್ನ ಬಿಟ್ಟು ಚೆಂಗನೆದ್ದು
ಎಲ್ಲಿಹೋದ ಮಹಾಶಿಲ್ಪಿ?

ಇಂಥ ಭವ್ಯಗುಡಿಯು ಬಿಟ್ಟು
ಹೋದನಲ್ಲಿ ವಿಜಯವಿಠಲ ?
ಕಡಲೆಕಾಳು ವಿಘ್ನಹರನು
ಕತ್ತಲಲ್ಲಿ ಹೆದರಿಸುವನು !

ಕಾವ್ಯದೀಪ್ತಿ ಬೆಳಕಿನಲ್ಲಿ
ಮೆರೆವ ಮಹಾತಿಲಕರೆಲ್ಲಿ ?
ಹೊನ್ನಹೊಗೆಯ ನಾಡಿನಲ್ಲಿ
ನರಿಯೂ ಮನೆಯ ಮಾಡಿತಿಲ್ಲಿ.

□□

ತಿಳಿದಿದ್ದೆ

ನಾ ಚಿಕ್ಕವನಿದ್ದಾಗ ಮಾವಿನಕಾಯಿ
ಚಟ್ನಿ ತಿಂದ್ಹಾಂಗ ಬದ್ಕು ಎಂದು
ತಿಳಿದಿದ್ದೆ !
ಆದ್ರೆ ಇದು ಬೇವಿನ್ಕಾಯಿ
ತಿಂದ್ಹಾಂಗಾತು.
ಮೊಖದವ್ಯಾಗ ಮೀಸೆ ಬಂದಾಯ್ತು.
ಮಾಸ್ಟರ್ ಡಿಗ್ರಿ ತಗಂಡಾಯ್ತು
ಅದ್ಕೆಷ್ಟೋಸಾರಿ ನಾನು ಕಾಮೆಂಟ
ಮಾಡಿದ್ದುಂಟು !
ತಮ್ಮ ತುತ್ನ ನನ್ಬಾಯಾಗಿಟ್ಟು
ನನ್ನ ಬೆಳ್ಸಿದೋರು
ನನ್ಮಗ ಎಂ.ಎ. ಪಾಸ್ ಮಾಡ್ಯಾನಂತ್
ಜಂಭಕೊಚ್ಕೊಂಡು ಎಷ್ಟೋ ಕನಸ
ಕಂಡದ್ದುಂಟು.
ಯಾರ್‍ಯಾರೆ ಕಾಲು ಹಿಡಿದದ್ದೆಷ್ಟೋ
ಮೈ ಬೆವರು ಸುರ್ಸಿದ್ದೆಷ್ಟೋ
ಮರೆತು ಬಿಟ್ರು.
ನಾನು ಊರಗೋಲಾಗಬೇಕಾದವ
ಆದರss ಆದರsss
ಛೇ ಮುಂದಿನ ಕತೆ ಹೇಳಬಾರ್ದು.
ಬಂಗಾರದ ಪದ್ಕ ಕೊಟ್ಟೋರು
ದುಡಿಯಾssಕ ಕಲ್ಸಲಿಲ್ಲ.
ನಾನು ಬಂದದ್ದು ಬಂದದ್ದು
ಫ್ಯಾಕ್ಟರಿಯ ರೆಡಿಮೇಡದಂತೆ.

□□

● ಮೋಹನ ನಾಗಮ್ಮನವರ

ಹೀಗೊಂದು ವಿರಹಗೀತೆ

ಬೀಸುವ ತಂಗಾಳಿಯಲ್ಲೂ
ಸಂಜೆಗೆಂಪಿನ ರಂಗಿನಲ್ಲೂ
ಅರಳಿನಿಂತ ಸುಮಗಳಲ್ಲೂ
ನನ್ನ ಮಂಜುಳೆಯ ಮೊಗ ತೇಲಿಬರುತ್ತದೆ.
ಆದರೆ ಹಿಂದೆಯೇ ಕಳೆದ ದಿನಗಳ
ಪ್ರೇಮಕಾವ್ಯದ ರಸನಿಮಿಷಗಳ
ಸಾಲು ದಟ್ಟೈಸಿ ಬಂದು
ಹಳೆಯ ನೆನಪುಗಳೆಲ್ಲ ಉಕ್ಕುವಂತೆ ಮಾಡುತ್ತದೆ.

ಬಾಲ್ಯದ ದಿನಗಳಲಿ
ನಾವಿಬ್ಬರೂ ಮುಗ್ಧತೆಯ
ಪರಿಧಿ ದಾಟಿರಲಿಲ್ಲ. ಆಗಿನ್ನೂ
ಕಾಪಟ್ಯವಿರಲಿಲ್ಲ ಅಲ್ಲಿ,
ಆದರೇನು ಸ್ನೇಹ ಸಲಿಗೆಗೆ ಬರವಿರಲಿಲ್ಲ.
ಮಂಜಿಯಾಗಿದ್ದಾಳಾಕೆ ಎನಗೆ
ಮುರಳಿಯಾಗಿದ್ದೆ ನಾನವಳಿಗೆ.

ಯೌವನದ ನೆರೆ ಬಂದು
ಮುಗ್ಧತೆಯು ಕೊಚ್ಚಿಹೋಗಲು
ಹರೆ ಹಂದರವಾಗಿ ಬೆಳೆದಿತ್ತು.
ನಮ್ಮಿಬ್ಬರ ನಡುವೆ.
ಮಂಜಿ ಮಂಜುಳೆಯಾದಳು
ಎದೆಗೆ ಮತ್ತಷ್ಟು ಹತ್ತಿರವಾದಳು
ಕಣ್ಣಿಂದ ಮಾತ್ರ ದೂರವಾದಳು.
ಮೊದಲಿನ ಸಲಿಗೆ ಇದ್ದಿರಲಿಲ್ಲ
ಕದ್ದು ಕೂಡುವ ಸ್ನೇಹಕೆ ಕೊರತೆ ಇರಲಿಲ್ಲ
ಸ್ನೇಹ ಗರಿಗೆದರೆ, ಪ್ರಣಯ
ರೆಕ್ಕೆ ಬಿಚ್ಚಿ ಹಾರಾಡಿತು.

ಸವಿ ತುಂಬಿದ ಕಬ್ಬು
ಗರಿಸೂಸಿ ತಲೆಬಾಗಿ ನಿಂತಿರಲು
ಗದ್ದೆಯ ಮಧ್ಯದಿಂದ ಕದ್ದು ಬರುವ
ನನ್ನ ಮಂಜುಳೆಯ ಕಂಡು ನಾಚಿ
ಕಬ್ಬು ಬಾಗೀತೇನೊ ಎನಿಸುತ್ತಿತ್ತೆನಗೆ.
ಕುಲನೆಲದ ಚಿಂತೆಯಿರಲಿಲ್ಲ ನಮ್ಮಲ್ಲಿ.
ಮಾವನ ಮಗಳೆಂಬುದುದೊಂದೇ ಸಾಕಿತ್ತು ನನಗೆ.
ತುಂಬಿದೆದೆಯು, ತೊನೆದಾಡುವ ಜಡೆಯು
ನಾಗವೇಣಿಯಾಕೆ.
ನನ್ನ ಎದೆಮಟ್ಟ ಎತ್ತರದ, ಬಳುಕು ನಡುವಿನ
ಮೋಹಕ ಕಣ್ಣುಗಳ ಹರಿಣಾಕ್ಷಿಯಾಕೆ.
ದುಂಬಿ ಹೋಲುವ ಮುಂಗುರುಳು
ಗುಲಾಬಿ ನಾಚುವ ಅಧರಗಳು.
ನೀಳನಾಸಿಕ ಹೊಳಪು ಗಲ್ಲ
ಮತ್ತೇನು ಬೇಕು ಸುಂದರಿಯೆನ್ನಲು ?
ಸ್ವರ್ಗದಪ್ಸರೆಯುರೂ ನಾಚಬೇಕವಳಂದ ಕಂಡು.
ವಿದ್ಯೆಯ ಸೆರೆ ಬಿಡಿಸಿಕೊಂಡು
ರಜೆಯಾದಾಗ ಹಳ್ಳಿ ಸೇರಿ
ಗದ್ದೆಗಳ ಮಧ್ಯದಲಿ ಕದ್ದು ಭೆಟ್ಟಿಯಾಗಿ
ಅಗಲಿಕೆಯ ನೂರು ನೋವುಗಳ
ಹಂಚಿಕೊಂಡು ನಕ್ಕಿದ್ದುಂಟು.
ಅವಳ ಇರುವಿಕೆಯಲ್ಲಿ ಜಗತ್ತು ಮರೆತಾಗ
ಜಗದರಿವು ನೀಡಿ ಮದುವೆಯ ಬಗ್ಗೆ
ಮರೆಯದೇ ಹೇಳಿ ನಾಚುತ್ತಾ
ಗದ್ದೆಗಳ ಬದುವಿನ ಮೇಲೆ
ಓಡಿಹೋದವಳ ಏನೆಂದು ಬಣ್ಣಿಸಲಿ!

ದಿನದಿನವೂ ಒಂದಾಗಿ
ಎದೆಎದೆಗಳ ಬೆಸೆದು
ನೋವು ನಲಿವುಗಳನು
ಹಂಚಿಕೊಂಡು
ರಜೆ ಕಳೆದದ್ದೇ ಗೊತ್ತಾಗದಂತಾಗಿ
ಕೊನೆಗೊಮ್ಮೆ ರಜೆ ಮುಗಿದು ಮತ್ತೆ
ವಿದ್ಯೆಯ ಸೆರೆ ಸೇರಲು ಹೊರಟುನಿಂತಾಗ
ಅವಳ ಕಣ್ಣೀರು ನನ್ನ ಬೀಳ್ಕೊಟ್ಟಿತ್ತು.

(ಹಿಂದಿನ ದಿನವೇ ಅವಳ ಕಣ್ಣೀರು
ನನ್ನ ಎದೆಯನ್ನೆಲ್ಲ ತೊಯ್ಸಿದರೆ, ನನ್ನ
ಕೈ ಅವಳ ತಲೆ ನೇವರಿಸಿ ಸಾಂತ್ವನ ಹೇಳಿತ್ತು
ತುಟಿ ಅಭಯದ ಮುದ್ರೆಯೊತ್ತಿತ್ತು)

ನನ್ನ ಬರುವಿಕೆಯ ನಿರೀಕ್ಷಿಸುವ ಕಣ್ಣುಗಳಿಗೆ
ಬೇಗ ಬರುವೆನೆಂದು ಕಣ್ಣಿಂದಲೇ ಹೇಳಿ
ಬಸ್ಸನೇರಿ ಎದೆತುಂಬ ನೋವುತುಂಬಿ ಕುಳಿತೆ.
ಕಾಲ ಕಳೆಯುತಲಿತ್ತು, ವಿರಹದಾ ನೋವು
ಎದೆಯೊಳಗೆ ಚಿಗುರುತ್ತಲೇ ಇತ್ತು.
ನನ್ನ ಅವಳ ಸಾನಿಧ್ಯ ವಿಧಿಗೆ
ಸರಿಯೆನಿಸಲಿಲ್ಲವೇನೊ. ಬರಸಿಡಿಲೊಂದು ಬಿತ್ತು.
ನನ್ನ ಮಂಜುಳೆ ಬದುಕದಿಗಂತದಲಿ ಮಂಜಾಗಿದ್ದಳು
ನನ್ನಿಂದ ಬಲುದೂರ ನಡೆದಿದ್ದಳು.

ನೀರು ತುಂಬಿದ ಬಾವಿ ಮೃತ್ಯುವಾಗಿತ್ತವಳಿಗೆ
ಕಾಲು ಜಾರಿದ್ದೊಂದೇ ನೆವ ನನ್ನನಗಲಿದ್ದಳಾಕೆ.
ನನ್ನ ಕನಸುಗಳ, ನನ್ನ ಬಯಕೆಗಳೆಲ್ಲವನೂ
ತನ್ನೊಂದಿಗೆ ಕೊಂಡೊಯ್ದಿದ್ದಳಾಕೆ.
ಎದೆ ಬರೀ ಮರಳುಗಾಡಾಗಿತ್ತು
ಕೊನರದ ಬರಡು ಮರವಾಗಿತ್ತು
ಬದುಕಿನಸ್ಸೊಂದು ಅಧ್ಯಾಯ ಮುಗಿದಿತ್ತು.

ಪ್ರತಿ ದಿನದ ಅವಳ ನೆನಪಿನಲಿ
ಬದುಕು ಕೂಡ ಅಸಹನೀಯವಾಗಿತ್ತು
ಅವಳಿರದ ಬಾಳು ಶೂನ್ಯವೆಂದೆನಿಸುತ್ತಿತ್ತು
ಕಥೆಯಾದಳಾಕೆ, ವ್ಯಥೆಯಾದೆ ನಾನು.
ಅವಳ ಸೊಬಗು ಕಂಡ ಸ್ವರ್ಗದಪ್ಸರೆಯರು
ಅಸೂಯೆ ತೋರಿದರೇನೋ.
ಅವಳ ಚೆಲುವಿನಿಂದ ಸೃಷ್ಟಿ ನಾಚಿ
ಮುನಿಸು ತೋರಿತೇನೋ.
ನನ್ನ ಪಾಲಿಗೆ ಸುಮಧುರ ಕನಸಾಗುಳಿದಳಾಕೆ.

● ಶರತ್ ಜಮುಖಂಡಿ

ಇದೇ ಕರ್ತವ್ಯ

ಕಿತ್ತ ನೆನಪಿನಲಿ ಬಿದ್ದ
ಕಹಿಬೇರುಗಳು
ಎದ್ದು ಬಾರದ ಸಿಹಿನೆನಪುಗಳು
ನಾಶವಾಗುತ್ತಿವೆ ನನ್ನ ಪ್ರಾಣಗಳು,
ಎತ್ತ ನೋಡಿದರೂ ಕತ್ತಲು
ಬರುವವರಿಲ್ಲ ನನ್ನ ಎತ್ತಲು
ದುಷ್ಟಶಕ್ತಿಗಳು ಮುತ್ತಲು
ಕಾಣುತ್ತಿರುವೆ ಬರೀ ಸೋಲು ನನ್ನ ಸುತ್ತಲು.
ಪ್ರೇಮದ ಕರುಳು ಬತ್ತಿ
ಸ್ವಾರ್ಥದ ನೆರಳು ಎತ್ತಿ
ಹಿರಿದು ಮಸೆದಂತಹ ಕತ್ತಿ
ಮಾಡದಿರುವುದೇ ದೊಡ್ಡ ಬುತ್ತಿ.
ಎತ್ತ ಕಂಡರೂ ಕೊಳೆ
ಅದರಲ್ಲಿ ಕಾಣುವದು ಬಡವನ ಮೂಳೆ
ಆದರೆ ಮೇಲಿದೆ ಸಜ್ಜನರ ಹೊಳೆ
ಎಂದು ಬರುವದೋ ನಮ್ಮ ಪಾಳೆ.
ಕೇಳುತ್ತಿದೆ ಭರವಸೆಯನ್ನು ಕರ್ಣ
ಅವರೂ ಸಂದುತ್ತಿದೆ ಆಶಾಕಿರಣ
ಆಗಲಾರದೇ ನನ್ನ ಬೇಡಿಕೆಯ ಭರಣ
ಆದ್ದರಿಂದಲೇ ಪ್ರಿಯ ನಮಗೀಗಲೇ ಮರಣ.
ಜನಸ್ತೋಮವ ನಾ ಕೇಳುತ್ತಿರುವೆ
ಸಲಿಯಲಾರದವ ದುಃಖವನ್ನು
ಸುಖಪಡುವನು ಕಷ್ಟವನ್ನು
ಅನುಭವಿಸುವದೇಕೆ ?
ಅದೇ ಕರ್ತವ್ಯವೆ ?

□ □

● ಎಂ. ಎಸ್. ಪ್ರಭುಪ್ರಸಾದ

ಮರೆಯಲೆಂತು ?

ನಾಳೆ ಅರಳಿ
ಹೂವಾಗುವ ನೀನು ಇದೇ
ಅರಳರಳಿ ಹೊಸ
ಮಧುರ ಕಂಪನು ತಿಳಿಗಾಳಿಯಲಿ
ಬೀರಿ. ಕೊಂಬೆಯ ಮೇಲೆ ನಿಂತು. ಕಣ್ಣಿಗೆ
ತಂಪನ್ನಿತ್ತು,
ಬಾಲಭಾನುವ ನೋಡಿ ನಾಚಿ
ಕೆನ್ನೆ ಕೆಂಪಾಗಿಸಿ, ಮುಖವರಳಿಸಿ,
ಕಣ್ಣಲ್ಲಿ ಮಿಂಚು ಚೆಲ್ಲಿ
ಭ್ರಮಿಸುವ ಭ್ರಮರಗಳಾಕ್ರಮಣದಿಂದ
ನೋವಿನ ನೀರನ್ನು ಪಕಳೆಗಳಲಿ ಮೂಡಿಸಿ
ದುಃಖದ ಭಾರದಿಂದ
ಪಕಳೆಗಳನು ಕಳಚುತ್ತಾ
ಮಧುವ ದುಂಬಿಗೆ ಹೀರಲು ಬಿಟ್ಟ
ನಿನ್ನಂಥ ತ್ಯಾಗಮಯಿ
ಜೀವಿಗಳು, ಅವುಗಳ ನೆನಪುಗಳು ನನ್ನ
ಹೃದಯದಲ್ಲಿ ನೋವಿನೆಳೆಗಳನ್ನು
ನೇಯುತ್ತವೆ.
ನಿನ್ನ ಜೀವಿತವೆಷ್ಟೇ ಚಿಕ್ಕದಾದರೂ
ಮನಸಿಗೆ ಮಧುರ ಕಂಪ ಮೂಡಿಸಿ
ಚಿರಕಾಲ ಮನದಲ್ಲಿ
ಬೆಳಗುವ ಏಕೈಕ ಕನ್ಯೆ
ನೀನು ಒಂದೇ ದಿನದಲ್ಲಿ
ಮೊಗ್ಗಾಗಿ ಹೂವಾಗಿ
ಹೆಣ್ಣಾಗಿ ತಾಯಾಗಿ
ಮಗುವ ಬಿಟ್ಟು ಮತ್ತೆ ಬರದಂತೆ ಮಾಯವಾಗಿ
ನನಗೆ ಚಿರವಿರಹವನಿತ್ತು
ಬೆಳಗುವ
ನಿನ್ನ ನಾ ಮರೆಯಲೆಂತು ?

□ □

● ಮಂಜುಳಾ ಜೀರಗ್ಯಾಳ

ಬತ್ತಲೆ

ಬತ್ತಲೆಯ ಬದುಕಿನಲ್ಲಿ
ಬತ್ತದ ಭಾವನೆ ತುಂಬಿ
ಮುತ್ತಿನಂಥ ಕವನ ಬರೆಯಬೇಕೆಂದೆ.
ಕತ್ತನ್ನು ತಗ್ಗಿಸಿ ಕಣ್ಣು ಮುಚ್ಚಿದಾಗ
ಅಲೆಯಾಗಿ ಹರಿದಿತ್ತು ಭಾವ ಮನಸಿನಾಗ.
ಅಲೆಯಾದ ಭಾವವನ್ನು ಅಪ್ಪಬೇಕೆಂದಾಗ
ಸದ್ದಿಲ್ಲದೇ ಹರಿದಿತ್ತು ಸಂದಿನಾಗ.
ನಿರಾಶೆಯ ಮನದಿಂದ ಅಪ್ಪುಗೆ ಹರಿದಾಗ
ಅಡಗಿತ್ತು ಮುತ್ತೊಂದು ಸಿಂಪಿನಾಗ.
ನುಡಿದಿತ್ತು ನಗುವಾಗಿ 'ನಾ ಭಾವನೆಯ ನೆನಪೆಂ'ದು ಆಗ.
ಮುತ್ತಿರಲಿ, ಮಾಣಿಕ್ಯವಿರಲಿ
ಆಸೆ ಹರಿಯಿತೆ ? ಹೃದಯ ಸಡಿಲಿಸಿತೆ ?
ಮನಸಿನ ಭಾರ ಇಳಿಯಲಿಲ್ಲ
ಭಾವನೆ ಬದುಕಿಗೆ ಬರಲಿಲ್ಲ.
ಆಸೆ ಆಸೆಯೇ ಆಯಿತು.
ಹೃದಯ ಹೊರೆಯಾಗಿ ಕಂಡಿತು.
ಮುತ್ತಿನಂಥ ಕವನ ಮುತ್ತಾಗಿಯೇ ಉಳಿದು
ಬತ್ತಲೆಯ ಬದುಕು ನಿಚ್ಚಳವಾಯಿತು.

□ □

ನಾನು ಮತ್ತು ಅವಳು

ಬದುಕಿನ ಆಗಸದಲ್ಲಿ ಕೊಬ್ಬಿದ
ಎರಡು ಕಪ್ಪುಮೋಡಗಳು
ನನ್ನಲ್ಲಿ ಧನಧ್ರುವ
ಅವಳಲ್ಲಿ ಋಣಧ್ರುವ.

ಯಾವುದೋ ಒಂದು ಗಾಳಿಯ ಒತ್ತಡದಿಂದ
ನಾವಿಬ್ಬರೂ ಸಮೀಪಿಸಿದಾಗ
ಖಟ್ ಖಟ್ ಖಡಲ್
ಗುಡುಗು. ಅದರಿಂದ ಮಿಂಚು
ಬೆಂಕಿ
ಸಿಡಿಲು,
ಸಾಮರಸ್ಯವಿಲ್ಲದ ಎರಡು ವಿರುದ್ಧ ದೆಸೆಗಳು
ಬೂಟಾಟಿಕೆಯೋ ವೇದನೆಯೋ—
ಮೋಡ ಸುರಿಸುವ ನೀರಿನ ಧಾರೆಯಂತೆ
ಅಳುವಳು.
ನನಗದು ತಿಳಿಯದು.
ಅಂತಃಕರಣದಿಂದ ಕೇಬನಿ ಒರೆಸುವುದಾಗಲಿ
ರಭಸದಿಂದ ಒದೆಯುವುದಾಗಲಿ
ಆಗದೆ
ಮತ್ತೆ ಕ್ಷೀಣವಾದ ಮೋಡದಂತಾಗಿ
ಎಲ್ಲಿಯೋ ಹಾರಿ ಹೋಗುವೆ.
ಇಷ್ಟೇ ಬದುಕು.

□ □

● ಈರಣ್ಣ ಅಗಳಗಟ್ಟಿ

ಭೂಮಿ ಉಳಾವನ ಭೂಮಿ ಒಡೆಯ

"ಭೂಮಿ ಉಳಾವನಽ ಭೂಮಿ ಒಡೆಯ" ಅಂತ
ಮ್ಯಾಲಿನೋರು ಸಾರಿ ಹೇಳ್ಯಾರ !
ಆದ್ರಽ ನನ್ನೊಡೆಯಾ,
ನಿನ್ನ ಭೂಮಿ ನನಗ ಬ್ಯಾಡ.
ತುತ್ತಕೂಳಿಗೆ ಗತಿಯಿಲ್ಲದಾಗ
ಆಸ್ರಾ ನೀಡಿದ ದೇವ ನೀನು !
ನಿನಗ ಎರಡು ಬಗದ್ರ
ನಾ ಬದಕಾಕಿಲ್ಲ !

ನಿನ್ನ ಎರಡೆತ್ತಿನ ಜೊತಿ
ನನಗೂ ದುಡ್ಯಾಕ ಕೊಟ್ಟಿ.
ಚಿನ್ನದಂಥ ನನ್ನ ಹರೇದ ಹೆಂಡತಿನ್ನ
ಅರಮನಿಯೊಳಗ
ಅರಗಿಣಿ ಹಾಂಗ ಇಟಗಂಡಿ.

ದುಡ್ದ ಬ್ಯಾಸತ್ ಬರೊ ನನ್ನ ಮೈಗೆ
ಮಲಗಾಕ ಜಗಾ ಕೊಟ್ಟಿ.
ನಾ ಕಟ್ಟಿಕೊಂಡಾಕಿನಂತೂ
ನಿನ್ನ ಹತ್ತಿರದಾಗಽ ಇಟಗಂಡಿ.
ಅದನ್ನ ನಾ ಹ್ಯಾಂಗ ಮರೀಲಿ ಧನಿ
ನಿನ್ನ ನಾ ಹ್ಯಾಂಗ ಮರೀಲಿ ?

"ನಿನ್ನ ಹೊಟ್ಟಿ ತುಂಬಿಕೊಳ್ಳೂದಽ
ನಿನಗ ಒಜ್ಜಿ ಆಗೇತಿ.
ಮಕ್ಳಾ ಹಡ್ದು ಇನ್ನಷ್ಟ ಒಜ್ಜಿ ಯಾಕ ಮಾಡಕೋತಿ
ಅದಕಽ ನಿನ್ನ ಹೆಂಡತಿನ್ನ
ನೀ ಕೂಡಬ್ಯಾಡ" ಅಂತಽ
ನನಗ ಬುದ್ಧಿ ಹೇಳಿದ ಬುದ್ಧ ನೀನು.

ಆದನ್ನ ನಾ ಹ್ಯಾಂಗ ಮರೀಲಿ ಧನಿ
ನಿನ್ನ ನಾ ಹ್ಯಾಂಗ ಮರೀಲಿ ?

ನಾ ಖರೆ ಹೇಳ್ತಿನಿ ನನ್ನೊಡೆಯಾ
ನಾ ಗಟ್ಟಿಯಿದ್ದಾಗ
ನನ್ನ ರಟ್ಟಿವ್ಯಾಗ ತುತ್ತುರೊಟ್ಟಿ ಕಾಣಲಿಲ್ಲ !
ಮ್ಯಾಲಿನೋರಂತೂ ವ್ಯಾಲಽ ನೋಡಿದ್ರು
ಪಾದಕ್ ಬಿದ್ರು ಒದ್ದ ಬಿಟ್ರು !
ಆದ್ರಽ ಈಗ
"ಸಾಯೋ ವಯಸಿನ್ಯಾಗ ಕಾಯಾಕ ಬಂದಾರ"!
ಇವರ್ನ ನಾ ಹ್ಯಾಂಗ ನಂಬಲಿ ಧನಿ ?
ನಿನ್ನ ನಾ ಹ್ಯಾಂಗ ಮರೀಲಿ ?

○○

ಗ್ವಾಡಂಬಿ ಪಟಕ ಸಿಸ್ತ

ಗಂಟ ಬಿದ್ದ ಹತ್ತಾರ ವರಸದಾಗ
ಎಂಟುಮಕ್ಕಳ ತಂದಿ
ಬೆಂಕಿ ಹಚ್ರ ನನ ಬಾಳೆ ಓದ
ತಿಪ್ಪಿ ವ್ಯಾಗಿನ ಹಂದಿ.
ಗುದ್ದಲಿ ಹೊರತ ಗತಿ ಇಲ್ಲ ನಂದು
ದಿನs ಮೂರ ಸೇರ
ಅವಕ್ಕ ಬೇಕ ಮೊದಲ ದಿನs ಎರಡಪಡಿ
ಹ್ಯಾಂಗ ಆಗಲಿ ಪಾರ.
ಲೇದ ಹೆಂಗಸಿದು ಮೂರಯಾಳೆ ತಿಂದ
ಕೌದಿ ಹೊತ್ತ ಮಲಗಿ
ವರಸಕೊಂದ ಬಿಡಬಿಡದ ಹಡದ
ನುಂಗೀತ ಗೋದಿ ಗುಳಗಿ.
ಅರಬಿ ಸಾವಕಾರ ನಡೂ ಪ್ಯಾಟ್ಯಾಗ
ಕೇಳತಾನ ಕರದ
ಬಾಕಿ ಕೊಡದಿದ್ರು ಕೈಯಾಗ ಕೊಡತಾನ
ಕಾಲ ತಿರವಿ ಮುರದ.
ನನಗ ಅಂಗಿ ಅಪ್ಪಾ ನನಗ ಚೆಡ್ಡಿ ಅಂತ
ಬುಳುಬುಳು ಅಳತಾವ
ಇಸಾ ಕುಡದನಂದ್ರು ಒಡಕ ಕಾಸ ಇಲ್ಲ
ಬ್ಯಾಸರಾತ ಜೀವ.
ಎಷ್ಟ ಅಂದ್ರು ಇನ್ನೆರಡ ವರಸ ತಡಿ
ಕಷ್ಟ ಐತಿ ನನ ಹೊಟ್ಟೀಗಿ.
ಗಂಡಮಕ್ಕಳೆಲ್ಲ ಬೆಳದವ್ಯಾಗ
ಎಳುವತೀನ ಕೈ ಮೀಸೀಗಿ.
ಸಡ್ಡ ಬಡದ ಹಿರಿಮಗ ಖೇಣದಾಗ
ಒಗಿತಾನ ಕುಸ್ತಿ ಮಸ್ತ
ಕೈಬಾಯ್ಗಿ ಬಂದ ವ್ಯಾಗ ನಂದೇನsತಿ
ಗ್ವಾಡಂಬಿ ಪಟಕ ಸಿಸ್ತ.

● ಎಚ್.ಜಿ.ನೀರಗೇರಿ

ಸೊನ್ನೆ

ಅವರು ಇವರು ನಾನು
ಹೀಗೆ ತ್ರಿಕೋನದಲ್ಲಿ ಸುತ್ತಿ
ಅವರಿವರಲ್ಲಿ ಕರಗಿ
ಯಾವುದೋ ಅಂಕಿಯಾಗಲು ಹೋಗಿ
ಭಾಗಿಸಿ ಭಾಗಿಸಿ
ಕಳೆದೂ ಕಳೆದೂ ಕೊನೆಗೆ
ನನ್ನದೆನ್ನುವುದೆಲ್ಲ ಕಳಚಿ
ಶೇಷ ಸೂರ್ಯ ಚಂದ್ರ ಭೂಮಿಯಂತೆ
ಆಕಾಶದೆತ್ತರ ಸೊನ್ನೆಯಾಗಿ ನಿಲ್ಲುತ್ತೇನೆ.

□□

ರಾಮಚಂದ್ರ ಹೆಗಡೆ : ಒಂದು ಪರಿಚಯ

● ವ್ಹಿ. ಎಸ್. ಐಹೊಳೆ



ಇಂಗ್ಲೀಷ ಅಂತಿಮ ವರ್ಗದಲ್ಲಿ ಅಧ್ಯಯನ ಮಾಡುತ್ತಿರುವ ರಾಮಚಂದ್ರ ಹೆಗಡೆ ತುಂಬ ವಿಶಿಷ್ಟವ್ಯಕ್ತಿ. ಉತ್ತರ ಕನ್ನಡದ ಕುಮಟಾ ತಾಲೂಕಿನ ಮೂರೂರಿನವರಾದ ಇವರು, ಕವಿ ಗಾಯಕ ಉತ್ತಮ ವಾಗ್ಮಿ-ಹೀಗೆ ಬಹುಮುಖ ಪ್ರತಿಭಾವಂತರು. ಈ ರೀತಿ ಹಲವು ಮುಖಗಳನ್ನು ತನ್ನೊಳಗೆ ತುಂಬಿಕೊಂಡು ಬೆಳೆಯುತ್ತಿರುವ ಇವರಿಗೆ ಈ ಎಲ್ಲ ವಿವಿಧ ಕ್ಷೇತ್ರಗಳನ್ನು ಕುರಿತಂತೆ ನಾನು ಇಟ್ಟ ಪ್ರಶ್ನೆಗಳು ಮತ್ತು ಅವಕ್ಕೆ ಅವರು ನೀಡಿದ ಉತ್ತರಗಳು ಇಲ್ಲಿವೆ.

ಪ್ರಶ್ನೆ : ಹೆಗಡೆಯವರೇ, ವಿದ್ಯಾರ್ಥಿ ಭಾರತಿಯ ಪರವಾಗಿ ಅಭಿನಂದನೆಗಳು. ಮೊಟ್ಟಮೊದಲನೆಯದಾಗಿ ನಿಮ್ಮ ಕವಿತೆಗಳ ಬಗ್ಗೆ ಕೇಳಬೇಕೆನಿಸುತ್ತದೆ. ಮೂಲತಃ ನೀವು ಕವಿತೆ ಬರೆಯಲು ಆರಂಭಿಸಿದ್ದು ಯಾವಾಗ ? ಮತ್ತು ಆಗ ಕವಿತೆ ಬರೆಯುವ ನಿಮ್ಮ ತುಡಿತಕ್ಕೆ ಯಾವುದಾದರೂ ನಿರ್ದಿಷ್ಟ ಕಾರಣ ಅಥವಾ ಸ್ಫೂರ್ತಿ ಇದೆಯೇ ?

ಉತ್ತರ : ಕವಿತೆಗಳು ಹುಟ್ಟಿಕೊಳ್ಳುವ ಹಿಂದಿರುವ ವಿಚಿತ್ರ ಕ್ರಿಯಾಶೀಲತೆಯ ಬಗ್ಗೆ ಕುತೂಹಲ ನನಗೆ ಬಹಳ ಚಿಕ್ಕಂದಿನಿಂದಲೂ ಇತ್ತು. ಆದರೆ ಆ ಕ್ರಿಯಾಶೀಲತೆ ನನ್ನ ಅನುಭವಕ್ಕೆ ಬಂದದ್ದು ಎಂದರೆ ನಾನು ಕವಿತೆ ಬರೆಯಲು ಆರಂಭಿಸಿದ್ದು-ಪಿ.ಯು.ಸಿ.ಯಲ್ಲಿರುವಾಗ. ಅದಕ್ಕೆ ಬಹುಶಃ ಇಡೀ ಜಗತ್ತೇ ಕವಿತೆಯಾಗಿ ಕಾಣುವ ಆಗಿನ ಮನೋಭಾವ ಮತ್ತು ನನ್ನ ಸುತ್ತಲೂ ಬರೆಯುತ್ತಿದ್ದ ನನ್ನ ಸಹೋದರ ಹಾಗೂ ಹಲವಾರು ಕವಿಗೆಳೆಯರ ಪ್ರಭಾವವೂ ಕಾರಣವಿರಬಹುದು. ಇದಕ್ಕೂ ಬೇರೆಯೇ ಆದ ಕಾರಣ ಇತ್ತೆಂದು ನನಗೆ ಅನ್ನಿಸುವುದಿಲ್ಲ.

ಪ್ರಶ್ನೆ : ನಿಮ್ಮನ್ನು ಪ್ರಭಾವಿಸಿದ ಹಾಗೂ ಆಕರ್ಷಿಸಿರುವ ಕವಿಗಳು ಯಾರು ?

ಉತ್ತರ : ಇತರ ಅನೇಕ ಕವಿಗಳಂತೆ ನನ್ನನ್ನು ಆಕರ್ಷಿಸಿದ ಕವಿಗಳಲ್ಲಿ ಬೇಂದ್ರೆ ಮೊದಲಿಗರು. ಅವರ 'ಮೂಡಲ ಮನೆಯ', 'ನೇಸರ ನೋಡು' ಮತ್ತು 'ಬಂತಿದೋ ಶೃಂಗಾರಮಾಸ', ಕವಿತೆಗಳು ಇಂದೂ ನನ್ನ ಮೆಚ್ಚಿನ ಕವಿತೆಗಳಾಗಿಯೇ ಉಳಿದಿವೆ. ನಂತರದ ಹಂತಗಳಲ್ಲಿ ಕೆ. ಎಸ್. ನ, ಚೆನ್ನವೀರ ಕಣವಿ, ಡಿ. ಎಸ್. ಕರ್ಕಿ ಮತ್ತು ನಿಸಾರ ಅಹಮದ್ ಅವರ ಕವಿತೆಗಳು ನನ್ನ ಮೇಲೆ ಪ್ರಭಾವ ಬೀರಿವೆ. ಇತ್ತೀಚೆಗೆ ಹೊಸಧ್ವನಿ ಮತ್ತು ಆಯಾಮ ಪಡೆದುಕೊಂಡಿರುವ 'ಬಂಡಾಯ' ಮತ್ತು 'ದಲಿತ' ಕವಿಗಳೂ ನನಗೆ ಬಹಳ ಆತ್ಮೀಯರಾಗಿದ್ದಾರೆ.

ಪ್ರಶ್ನೆ : ಕನ್ನಡಸಾಹಿತ್ಯದ ಸಮಕಾಲೀನ ಬೆಳವಣಿಗೆಗಳಾದ 'ಬಂಡಾಯ' ಮತ್ತು 'ದಲಿತ' ಸಾಹಿತ್ಯಗಳ ಬಗ್ಗೆ ನಿಮಗೆ ಏನು ಅನಿಸುತ್ತದೆ ?

ಉತ್ತರ : ನನಗೆ ಅನಿಸುವ ಹಾಗೆ, ಸಮಾಜವನ್ನು ಮಾನವೀಯಗೊಳಿಸಬೇಕಾಗಿರುವ ಅವಶ್ಯಕತೆಗಳನ್ನು ಕೂಗಿ ಹೇಳುತ್ತಿರುವ ಧ್ವನಿ ಅವು. ಇದಕ್ಕೂ ಹೆಚ್ಚು ಸಾಹಿತ್ಯದ ಬೆಳವಣಿಗೆಯ ಮೇಲೆ ಮಾತನಾಡಬಲ್ಲ ಪ್ರೌಢಿಮೆ ನನಗೆ ಇಲ್ಲ.

ಪ್ರಶ್ನೆ : ಇಂಗ್ಲೀಷ ಸಾಹಿತ್ಯದ ವಿದ್ಯಾರ್ಥಿಯಾಗಿದ್ದುಕೊಂಡೂ ಕನ್ನಡದಲ್ಲಿ ಕವಿತೆ ಬರೆಯುತ್ತಿದ್ದೀರಲ್ಲ ?

ಉತ್ತರ : ಇದು ಬಹುಶಃ ನಮಗೆ ಸಾಮಾನ್ಯವಾಗಿ ಕೇಳಲ್ಪಡುವ ಪ್ರಶ್ನೆ. ಕನ್ನಡ ನನ್ನ ತಾಯಿಭಾಷೆ ಮತ್ತು ಭಾವನೆಯ ಭಾಷೆ. ಇಂಗ್ಲೀಷ ಭಾಷೆಯ ಬಗ್ಗೆ ನನಗೆ ಆಳವಾದ ಪ್ರೀತಿ ಮತ್ತು ಗೌರವವಿದೆ. ಆದರೆ ಕರ್ನಾಟಕದಲ್ಲಿ ಕನ್ನಡದಲ್ಲಿ ಬರೆಯಲು ಯಾರದೂ ಅಭ್ಯಂತರವಿಲ್ಲ ಎಂದು ನಾನು ತಿಳಿದಿದ್ದೇನೆ.

ಪ್ರಶ್ನೆ : ನೀವು ಹಾಡುವುದನ್ನೂ ಕೇಳಿದ್ದೇನೆ. ನೀವು ಸಂಗೀತದಲ್ಲಿಯೂ ಸಾಕಷ್ಟು ಆಸಕ್ತಿ ಮತ್ತು ಪ್ರೌಢಿಮೆ ಕೂಡ ಸಾಧಿಸಿದ್ದೀರಲ್ಲವೆ ?

ಉತ್ತರ : ಪ್ರಾಮಾಣಿಕವಾಗಿ ಹೇಳುವದಾದರೆ, ನಾನು ಸಂಗೀತದಲ್ಲಿ ಈವರೆಗೆ ಸಾಧಿಸಿದ್ದು ಕೇವಲ ಆಸಕ್ತಿ ಮಾತ್ರ. ನನಗೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಮತ್ತು ವಾದ್ಯಸಂಗೀತದ ಗೀಳು ಬಹಳ. ನಾನು ಭಾವಗೀತೆಗಳನ್ನು, ಉತ್ತರಕನ್ನಡದ ಹಲವಾರು ತರಹದ ಜನಪದಗೀತಗಳನ್ನು (ಯಕ್ಷಗಾನ ಭಾಗವಂತಿಕೆಯನ್ನೂ ಸ್ವಲ್ಪ ಕಲಿತಿದ್ದೇನೆ) ಹಾಡಿದರೂ ಸಂಗೀತವನ್ನು ಶಾಸ್ತ್ರೀಯವಾಗಿ ಕಲಿಯಬೇಕೆನ್ನುವ ನನ್ನ ಬಯಕೆ ಇನ್ನೂ ಈಡೇರಿಲ್ಲ.

ಪ್ರಶ್ನೆ : ನಿಮ್ಮ ಭಾಷಣ, ಕವಿತೆ, ಹಾಡುಗಳ ಜತೆಗೇ ನೀವು ನಿಮ್ಮ ಶೈಕ್ಷಣಿಕ ಪ್ರಗತಿಯನ್ನೂ ಚೆನ್ನಾಗಿಯೇ ಸಾಧಿಸಿದ್ದೀರಿ. ಈ ರೀತಿ ಹಂಚಿಹೋಗುವ Attention ಶೈಕ್ಷಣಿಕ ಪ್ರಗತಿಗೆ ಮಾರಕ ಎಂದು ನಿಮಗನಿಸುವದಿಲ್ಲವೆ ?

ಉತ್ತರ : ಖಂಡಿತ ಇಲ್ಲ, ಬದಲಾಗಿ ಪೂರಕ ಎಂದು ನನ್ನ ನಂಬುಗೆ. Attention ವನ್ನು ಕೇವಲ ಒಂದೇ ವಿಷಯದ ಮೇಲೆ ಕೇಂದ್ರೀಕರಿಸಿ ಅದನ್ನು ಉರು ಹಾಕಿಸುವದು ನಿಜವಾದ ಶಿಕ್ಷಣದ ಉದ್ದೇಶ ಅಲ್ಲ. ನಾನು ನಂಬಿಕೊಂಡು ಬೆಳೆದುಬಂದ ಹಾಗೆ, ಶಿಕ್ಷಣ ಬದುಕಿನ ಹರಹನ್ನು ವಿಸ್ತಾರಗೊಳಿಸಬೇಕು ಮತ್ತು ಹೊಸ ಹೊಸ ಸಾಧ್ಯತೆಗಳ ಅನ್ವೇಷಣೆಗೆ ಸಹಕಾರಿಯಾಗಬೇಕು. ಬದುಕನ್ನು ಆಳವಾಗಿ ಪ್ರೀತಿಸುವದನ್ನು ಮತ್ತು ಬದುಕಿನತ್ತ 'ಸೌಂದರ್ಯದ ದೃಷ್ಟಿಕೋನ' (aesthetic attitude) ವನ್ನು ಶಿಕ್ಷಣ ಬೆಳೆಸಬೇಕು. ನಾನು ನನ್ನ ಮನಸ್ಸಿನ ಕಿಡಕಿಗಳನ್ನು ನಿರಂತರ ತೆರೆದಿಡುತ್ತೇನೆ. ಹೊಸ ಅಲೆಗಳನ್ನು ಸ್ವೀಕರಿಸುತ್ತೇನೆ. ಇದರಿಂದ ನನಗೆ ಶೈಕ್ಷಣಿಕವಾಗಿಯೂ ಲಾಭವಾಗಿದೆ. ಇರುವ Syllabus ನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡಲು, ವಿಶ್ಲೇಷಿಸಲು ಮತ್ತು ಉತ್ತಮ ಸೃಜನಶೀಲ ಉತ್ತರಗಳನ್ನು ಬರೆಯಲು ನನಗೆ ಸಾಧ್ಯವಾಗಿದೆ. ಸಹಜವಾಗಿ ಹೆಚ್ಚು ಗುಣಗಳು ಬಿದ್ದೇ ಬೀಳುತ್ತವೆ. ಇದು ಸ್ವಲ್ಪ ಸುತ್ತುಬಳಸು ದಾರಿ. ಆದರೆ ಉತ್ತಮ ಟಾರ್‌ರೋಡು. ಅಲ್ಲದೆ ನಾನು ಎಂದೂ ನನ್ನ ಕ್ಲಾಸ್‌ನ Syllabus ನ್ನು ಲಘುವಾಗಿ ಪರಿಗಣಿಸುವುದಿಲ್ಲ.

ಪ್ರಶ್ನೆ : ಇಂದಿನ ವಿದ್ಯಾರ್ಥಿಗಳ ಗುಣಮಟ್ಟ ಮತ್ತು ನೈತಿಕಮಟ್ಟ ಇಳಿದಿರುವು ದಕ್ಕೆ ಮತ್ತು ಇಳಿಯುತ್ತಲೇ ಇರುವುದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ?

ಉತ್ತರ : ಇಂದಿನ ವಿದ್ಯಾರ್ಥಿಗಳ ಗುಣಮಟ್ಟ ಮತ್ತು ನೈತಿಕಮಟ್ಟ ಕುಸಿದಿರುವುದು ನಿಜ. ಗಾಂಧೀಜಿ ಕಾಲದ ಆದರ್ಶವಾದ ನಾಪತ್ತೆಯಾಗಿ ಜಾತಿ, ಧರ್ಮ, ಹಣ ಮತ್ತು ಇತರೇತರ ಶಕ್ತಿಗಳು ದೇಶವನ್ನು ಆಳಿದ್ದರಿಂದ ಉಂಟಾಗಿ ರುವ ನಿರಾಶಾವಾದದ ಪರಿಣಾಮ ಇದು ಎಂದು ನನ್ನ ಅನಿಸಿಕೆ. ಎಷ್ಟೇ ಉತ್ತಮ ಗುಣಗಳಿದ್ದರೂ ನೌಕರಿ ಸಿಗದಿರುವ ಹತಾಶ ಭಾವನೆ ನಾವು ಶಿಕ್ಷಣವನ್ನೇ ಲಘುವಾಗಿ ತೆಗೆದುಕೊಳ್ಳುವಂತೆ ಮಾಡಿದೆ. ಸಾಮಾನ್ಯ ವಾಗಿಯೇ ಇಳಿದಿರುವ ನೈತಿಕಮಟ್ಟ ವಿದ್ಯಾರ್ಥಿಗಳಲ್ಲೂ ಕಾಣಿಸಿಕೊಂಡಿ ದ್ದರಲ್ಲಿ ಆಶ್ಚರ್ಯವೇನೂ ಇಲ್ಲ. 'Standard' ಏರಿಸುವದಿದ್ದರೆ ದೇಶದ ಆರ್ಥಿಕ ಪ್ರಗತಿ ಸಾಧನೆಯಾಗಿ ತನ್ಮೂಲಕ ಸಾಮಾಜಿಕ ಆಶಾವಾದವನ್ನೂ ಮೂಡಿಸುವದೊಂದೇ ಉಪಾಯ ಎಂದು ನಾನು ಭಾವಿಸಿದ್ದೇನೆ.

ಪ್ರಶ್ನೆ : ಇಷ್ಟೆಲ್ಲ ವಿಚಾರ ಮಾಡಿರುವ ನೀವು ನಿಮ್ಮ ಖಾಸಗಿ ಬದುಕಿನ ಗುರಿಗಳ ಕುರಿತೂ ಯೋಚಿಸಿರಬಹುದು. ಆ ಕುರಿತು ನಾವು ತಿಳಿಯಬಹದೇ ?

ಉತ್ತರ : ನಮ್ಮ ಸಮಾಜದ ಗತಿ ಮಿತಿಯನ್ನು ನಿರ್ಧರಿಸಿರುವ ಮತ್ತು ನಿರ್ಮಿಸುವ ಆಡಳಿತಗಾರನಾಗಬೇಕೆನ್ನುವದು ನನ್ನ ಬಯಕೆ. ಯಾಕೆಂದರೆ ಕವಿಯಾಗುವುದಕ್ಕಿಂತ ಅಥವಾ ಇನ್ನಾವುದೇ ಕ್ಷೇತ್ರವನ್ನು ನನ್ನ ಕಾರ್ಯಕ್ಷೇತ್ರವಾಗಿಸಿಕೊಳ್ಳುವುದಕ್ಕಿಂತ ಬದುಕಿನ ಸಮಗ್ರತೆಯನ್ನು ನಿಯಂತ್ರಿಸುವ ಆಡಳಿತಗಾರನಾದರೆ ನಾನು ಬಹುವಾಗಿ ಬಯಸುವ ಸಾಮಾಜಿಕ ಪುನರುತ್ಥಾನದಲ್ಲಿ ಹೆಚ್ಚು ಕ್ರಿಯಾಶೀಲವಾಗಿ ಕೆಲಸ ಮಾಡಲು ನನಗೆ ಸಾಧ್ಯವಾಗಬಹುದು. Rupert Brooke ಹೇಳುವ "more important than read poetry or to write poetry is to live like a poem" ಎಂಬ ಮಾತುಗಳು ನನಗೆ ಬಹಳ ಅರ್ಥಪೂರ್ಣವಾಗಿ ಕಂಡಿವೆ. ನನ್ನ ಈ ವಿಚಾರಗಳೆಲ್ಲ ಬರಿಯ ಕನಸುಗಳಲ್ಲ ಅಥವಾ Idle idealism ಅಲ್ಲ. ನಾನು ಬಹಳಷ್ಟು ವಿಚಾರ ಮಾಡಿ, ವಾಸ್ತವಿಕ ಆಧಾರದ ಮೇಲೇ ತೆಗೆದುಕೊಂಡ ತೀರ್ಮಾನಗಳು. ಆಡಳಿತಗಾರನೊಬ್ಬ ಎದುರಿಸಬೇಕಾಗಿ ಬರುವ 'harsh reality'ಯ ಕಲ್ಪನೆ ನನಗೆ ಸಾಕಷ್ಟು ಇದೆ. ನನ್ನ ಗುರಿ ಸಾಧಿಸಲು ಬೇಕಾಗುವ ಪ್ರಯತ್ನವನ್ನೂ ಮಾಡುತ್ತಿದ್ದೇನೆ. ಅದೇ ಕಾರಣದಿಂದಲೇ ನನ್ನಲ್ಲಿರುವ ಕಲಾ ವಿಭಾಗಗಳು ಇನ್ನೂ Professional ರೂಪ ತಳೆಯದೆ ಕೇವಲ ಹವ್ಯಾಸಗಳಾಗಿಯೇ ಉಳಿದಿರುವುದು.

ಪ್ರಶ್ನೆ : ಇನ್ನೂ ಒಂದು ಪ್ರಶ್ನೆ. ನಿಮ್ಮ ಹಾಗೆ ವೈವಿಧ್ಯಮಯವಾದ ಆಸಕ್ತಿಯುಳ್ಳ ವ್ಯಕ್ತಿತ್ವ ರೂಪುಗೊಳ್ಳುದು ಹೇಗೆ ಇರಬಹುದು ?

ಉತ್ತರ : ಅದರ ಕುರಿತು ನಾನು ವಿಚಾರ ಮಾಡಿಲ್ಲ. ಆದರೆ ಆಸಕ್ತಿಗಳನ್ನು ಮುಕ್ತವಾಗಿ ಆಯ್ದುಕೊಳ್ಳಲು ನನಗೆ ಧಾರಾಳ ಸ್ವಾತಂತ್ರ್ಯ ನೀಡಿದ ನನ್ನ ಮನೆಯ ವಾತಾವರಣ ಈ ರೀತಿ ಹಲವು ಆಸಕ್ತಿಗಳು ಬೆಳೆದು ಬರಲು ಕಾರಣವಿದ್ದರೂ ಇದ್ದೀತು.

□ □

ಈ ಸಂಚಿಕೆಯ ಲೇಖಕರು

ಶ್ರೀ ವರ್ಷಾಲ್ ಶರಾವು
ಎಂ. ಎ. (ಕನ್ನಡ)
ಬಿ. ಆರ್. ಪ್ರೊಜೆಕ್ಟ್, ಶಿವಮೊಗ್ಗ

ಶ್ರೀ ಆರ್. ನಿರಂಜನ
ಎಂ.ಎಸ್‌ಸಿ(ಪ್ರಥಮ)ಗಣಿತಶಾಸ್ತ್ರ
ಗಣಿತಶಾಸ್ತ್ರ ವಿಭಾಗ
ಬಿ. ಆರ್. ಪ್ರೊಜೆಕ್ಟ್. ಶಿವಮೊಗ್ಗ

ಕು. ನಾಗಮಣಿ ಶೇ.
ಎಂ.ಎ. (ಕನ್ನಡ)
ಕನ್ನಡ ವಿಭಾಗ
ಬಿ. ಆರ್. ಪ್ರೊಜೆಕ್ಟ್, ಶಿವಮೊಗ್ಗ

ಶ್ರೀ ಬಿ. ಆರ್. ಮಂಜುನಾಥ
ಎಂ.ಎ.(ಕನ್ನಡ)
ಕನ್ನಡ ವಿಭಾಗ
ಬಿ. ಆರ್. ಪ್ರೊಜೆಕ್ಟ್, ಶಿವಮೊಗ್ಗ

ಮ. ಓ. ತಿಪ್ಪಯ್ಯ
ಎಂ.ಎ.(ಕನ್ನಡ)
ಕನ್ನಡ ವಿಭಾಗ
ಬಿ. ಆರ್. ಪ್ರೊಜೆಕ್ಟ್, ಶಿವಮೊಗ್ಗ

ಡಿ. ಭೋಜರಾಜು
ಕನ್ನಡ ವಿಭಾಗ
ಬಿ. ಆರ್. ಪ್ರೊಜೆಕ್ಟ್, ಶಿವಮೊಗ್ಗ

ಡಿ. ಯೋಗರಾಜಪ್ಪ
ಎಂ.ಎ.(ಕನ್ನಡ)
ಕನ್ನಡ ವಿಭಾಗ
ಬಿ. ಆರ್. ಪ್ರೊಜೆಕ್ಟ್, ಶಿವಮೊಗ್ಗ

ರಹಮಾನ ಆಲಿಖಾನ್
ಎಂ.ಎ. (ಕನ್ನಡ) ಪ್ರಥಮ
ಕನ್ನಡ ವಿಭಾಗ
ಬಿ. ಆರ್. ಪ್ರೊಜೆಕ್ಟ್. ಶಿವಮೊಗ್ಗ

೯ ಹೆ. ಹನುಮಂತರಾಯಪ್ಪ
ಎಂ. ಎ. ಪ್ರಥಮ (ಕನ್ನಡ)
ಕನ್ನಡ ವಿಭಾಗ
ಬಿ. ಆರ್. ಪ್ರೊಜೆಕ್ಟ್, ಶಿವಮೊಗ್ಗ

೧೦ ಕೆ. ಡಿ. ಕೃಷ್ಣಮೂರ್ತಿ
ಎಂ.ಎ. (ಅಂತಿಮ) ಕನ್ನಡ
ಕನ್ನಡ ವಿಭಾಗ
ಬಿ. ಆರ್. ಪ್ರೊಜೆಕ್ಟ್. ಶಿವಮೊಗ್ಗ

೧೧ ಎಂ. ಶಿವಪ್ಪ
ಎಂ. ಎ. (ಪ್ರಥಮ) ಕನ್ನಡ
ಕನ್ನಡ ವಿಭಾಗ
ಬಿ. ಆರ್. ಪ್ರೊಜೆಕ್ಟ್, ಶಿವಮೊಗ್ಗ

೧೨ ಎಸ್. ವಿ. ಲಕ್ಷ್ಮೀನಾರಾಯಣ
ಎಂ. ಎ. (ಪ್ರಥಮ)ಕನ್ನಡ
ಕನ್ನಡ ವಿಭಾಗ
ಬಿ. ಆರ್. ಪ್ರೊಜೆಕ್ಟ್, ಶಿವಮೊಗ್ಗ

೧೩ ರಾಮಚಂದ್ರ ಹೆಗಡೆ
ಎಂ. ಎ. (ಪ್ರಥಮ) ಇಂಗ್ಲಿಷ
ಇಂಗ್ಲಿಷ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೪ ಪಾಂಡುರಂಗ ಹುಯಿಲಗೋಳ
ಎಂ. ಎ. (ಅಂತಿಮ) ಕನ್ನಡ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೫ ಮಧು ಮಗದುಮ್ಮ
ಎಂ. ಎ. (ಪ್ರಥಮ) ಅರ್ಥಶಾಸ್ತ್ರ
ಅರ್ಥಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೬ ಶಿವಾನಂದ ಹೊಂಬಳ
ಎಂ.ಎ. (ಪ್ರಥಮ) ಕನ್ನಡ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೭ ಅಶೋಕ ಬಿರಾದಾರ
ಎಂ.ಎಸ್‌ಸಿ. (ಅಂತಿಮ) ಸಂಖ್ಯಾಶಾಸ್ತ್ರ
ಸಂಖ್ಯಾಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೮ ಬಿ. ಜಿ. ದಾಸರ
ಎಂ. ಎ. (ಪ್ರಥಮ) ಕನ್ನಡ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯ ಸುನೀತಾ ಕುಲಕರ್ಣಿ
ಎಂ.ಎ. (ಅಂತಿಮ) ತತ್ವಶಾಸ್ತ್ರ
ತತ್ವಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೦ ವಾಸುದೇವ ಶೆಟ್ಟಿ
ಎಂ.ಎ. (ಪ್ರಥಮ) ಕನ್ನಡ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೧ ಚೆನ್ನಬಸವ ಮಡ್ಡಿ
ಎಂ.ಎಸ್‌ಸಿ.(ಪ್ರಥಮ) ಗಣಿತಶಾಸ್ತ್ರ
ಗಣಿತಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೨ ವ್ಹಿ. ಬಿ. ಹಿರೇಮಠ
ಎಂ.ಎ. (ಪ್ರಥಮ) ಕನ್ನಡ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ

೨೩ ಸದಾಶಿವ ಮರ್ಜಿ
ಎಂ.ಎ (ಪ್ರಥಮ) ಸಮಾಜಶಾಸ್ತ್ರ
ಸಮಾಜಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೪ ಗಿರಿಜಾ ಅಣೆಪ್ಪನವರ
ಎಂ.ಎ. (ಅಂತಿಮ) ಕನ್ನಡ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೫ ಡಿ. ಬಿ. ಗಡೇದ
ಎಂ.ಎ. (ಪ್ರಥಮ) ಇಂಗ್ಲಿಷ
ಇಂಗ್ಲಿಷ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ

೨೬ ಎಸ್. ವ್ಹಿ. ಬಿರಾದಾರ
ಎಂ.ಎ. (ಪ್ರಥಮ) ಕನ್ನಡ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೭ ಶಿವಲೀಲಾ ನೆಲವಿಗಿ
ಎಂ.ಎ. (ಪ್ರಥಮ) ಕನ್ನಡ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೮ ಶಂಭು ಮೇರವಾಡೆ
ಎಂ.ಎ. (ಹಿಂದಿ)
ಹಿಂದಿ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೯. ವ್ಹಿ. ಎಸ್. ಮಾಳಿ
ಎಂ. ಎ. (ಪ್ರಥಮ) ಕನ್ನಡ
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೩೦. ಸಿದ್ದಲಿಂಗ ಪಾಟೀಲ
ಎಂ. ಎ. (ಅಂತಿಮ) ಕನ್ನಡ
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ

೩೧. ಮೋಹನ ನಾಗಮ್ಮನವರ
ಬಿ.ಎಸ್‌ಸಿ. (ಅಂತಿಮ) ಅಪರಾಧಶಾಸ್ತ್ರ
ಅಪರಾಧಶಾಸ್ತ್ರ ವಿಭಾಗ,
ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ
ಧಾರವಾಡ.